Excise Department man also got injured. It is since learnt that one of them has been discharged and the Proprietor's son is still an in-patient in the Hospital.

(*f*) It is learnt that some amount has been advanced by the Management towards the obsequies of the deceased.

Action for grant of compensation under the Workmen's Compensation Act has to be taken.

Mr. SPEAKER.—The House will now rise for lunch and meet again at 10-45.

The House adjourned for Lunch at Fifteen Minutes past Ten of the Clock and reassembled at Forty-five Minutes past Ten of the Clock.

[MR. SPEAKER in the Chair.]

NON-OFFICIAL BUSINESS : BILLS.

Mr. SPEAKER.—Now, Non-official Business. Are you moving your Bill, Sri G. A. Thimmappa Gowda ?

Sri G. A. THIMMAPPA GOWDA.—No, Sir, I am not moving.

Mr. SPEAKER.—Then, Resolutions.

RESOLUTIONS

Sri S. SRINIVASA IYENGAR (T.-Narasipur).—Sir, I beg to submit that Resolution No. 24 and Resolution No. 1 are similar in nature and identical word by word. Last year.....

Mr. SPEAKER.—Let the first resolution be moved. In case it is not moved, even though it is of a similar nature, you cannot have an opportunity.

Sri S. SRINIVASA IYENGAR.—Because the Member in whose name Resolution No. 1 stands is not here, it is not possible for me under rule 104 to move. But, since my Resolution is No. 24 and is of a similar nature word by word, not even a comma being different from Resolution No. 1, I may be permitted, Sir, to move it.

Sri J. MOHAMED IMAM (Jagalur).—Last time similar resolutions were moved and discussed together.

Mr. SPEAKER.—In fact, It is myself who suggested that procedure. If there were three or four resolutions of a similar nature, I suggested that they might be taken up together. But that was a different case altogether, because the first resolution was moved and discussed, and afterwards the other resolutions, along with that, were taken up. Here, the first resolution is not at all moved and it would be against ballot rules if Sri Srinivasa Iyengar is permitted to move his resolution. That is my difficulty.

Sri MULKA GOVINDA REDDY (Chitaldrug).—My point, Mr. Speaker, is.....

Mr. SPEAKER.—I have understood you and you have understood me. Your anxiety is to discuss the resolution and my anxiety is to adhere to the rule. (*Laughter.*)

Sri S. SRINIVASA IYENGAR.—According to the ballot rules of the Rules of Procedure, the Speaker has got powers to change it, Sir. Schedule II, item 10 is as follows :

> " The Speaker may, from time to time, make such variation in the procedure as he may consider necessary or convenient."

Mr. SPEAKER.—That is not applicable. Resolution No. 1 Sri Narasimha Reddy ; the member is not present. Resolution No. 2 is in the name of Sri Muniyappa. The subject of the second and the third resolution was discussed when cut motions were moved. But it is left to the Members to move them or not.

ಶ್ರೀ ಎ. ಮುನಿಯಪ್ಪ.—ನನ್ನ ನಿರ್ಣಯವನ್ನು ಪಾಪನು ತೆಗೆದುಕೊಳ್ಳುತ್ತೇನೆ, ಮುಂದಿನುವುದಿಲ್ಲ.

RESOLUTION NO. 3—EXTENSION OF PROHIBITION TO WET DISTRICTS.

ಶ್ರೀಮತಿ ಬಿ. ಎಲ್. ನುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಸ್ವಾಮಿ,

> "ಪಾನನಿರೋಧವನ್ನು, ಪಾನನಿರೋಧವು ಜಾರಿಯಲ್ಲಿಲ್ಲದಿರುವ ಸಂಸ್ಥಾನದ ಇತರ ಡಿಸ್ಟ್ರಿಕ್ಟುಗಳಲ್ಲಿ ಜಾರಿಗೆ ತರಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

(ಶ್ರೀಮತಿ ಬಿ. ಎಲ್. ಸುಬ್ಬಮ್ಮ.)

ಎಂದು ನನ್ನ ನಿರ್ಣಯವಿದೆ. ಅದನ್ನು ಮುಂಡಿಸುತ್ತೇನೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದಮೇಲೆ ಕೇಂದ್ರ ಮತ್ತು ಪ್ರಾಂತ ಸರ್ಕಾರದವರು ಅನೇಕ ಜನೋಪಯುಕ್ತ ಕಾರ್ಯಗಳನ್ನು ಮಾಡಿದ್ದಾರೆ. ಅದರಂತೆ ಈ ಪಾನನಿರೋಧವನ್ನು ಸಹ ಜಾರಿಗೆ ತಂದು ಜನರ ಸಾಮಾಜಿಕ ಸ್ಥಿತಿಗತಿಗಳನ್ನು ಅಭಿವೃದ್ಧಿ ಪಡಿಸಬೇಕೆಂದು ಪ್ರಯತ್ನಿಸಿದ್ದಾರೆ. ಆದರೆ ಅವರು ಯಾವ ಅಭಿಪ್ರಾಯದಿಂದ ಅದನ್ನು ಜಾರಿಗೆ ತಂದರೋ ಆ ಉದ್ದೇಶವು ಆ ಮಟ್ಟಕ್ಕೆ ಬರುವುದಕ್ಕೆ ಅವರು ತಂದಿರ ತಕ್ಕಂಥ ಯೋಜನೆಯು ಅಷ್ಟು ಸಮರ್ಪಕವಾಗಿಲ್ಲ, ಆದ್ದರಿಂದ ಅದನ್ನು ಸಂಸ್ಥಾನಾದ್ಯಂತವೂ ಜಾರಿಗೆ ತರಬೇಕು, ಈಗ ಕೆಲವು ಕಡೆ ಮಾತ್ರ ನಿರೋಧ ಮಾಡಿರುವುದು ಸರಿಯಲ್ಲ ಎಂಬ ಅಭಿಪ್ರಾಯವನ್ನು ಸರ್ಕಾರದ ಮುಂದಿಡಲು ನಾನು ಈ ನಿರ್ಣಯವನ್ನು ಸಭೆಯಮುಂದೆ ಇಟ್ಟಿದ್ದೇನೆ. ಈಗೇನಾಗಿದೆಯೆಂದರೆ ಪಾನನಿರೋಧ ಜಾರಿಯಿಲ್ಲರುವ ಕಡೆಗಳಲ್ಲಿ ಯಾರಾ ಧರೂ ಕಳ್ಳಬಟ್ಟಿ ಸಾರಾಯಿ ತಯಾರಿಸಿದರೆ ಪೋಲೀಸಿನವರಿಗೆ ನಿಜವಾಗಿಯೂ ಆರೀತಿ ತಯಾರಿಸಿದವರು ಕೈಗೆ ಸಿಕ್ಕದೆ ಬೇರೆ ಕೆಲವು ದೊಡ್ಡ ಮನುಷ್ಯರು ಎಂದರೆ ಅವರಿಗೆ ಒಂದು ಸಾವಿರ ಎಕರೆ ತೋಟ ಇದ್ದರೂ, ತೋಟದ ಕೂಲಿ ತಯಾರಿಸಿದರೆ ತೋಟದ ಮಾಲೀಕನನ್ನು ತಂದು ಜಾಮೀನಿಲ್ಲದ ವಾರಂಟ್‌ನಲ್ಲಿ ಜೈಲಿನಲ್ಲಿಟ್ಟಿರುವ ಅನೇಕ ಪ್ರಸಂಗಗಳು ನಮ್ಮ ಜಿಲ್ಲೆಯಲ್ಲಿ ಕಂಡುಬಂದಿವೆ, ಮತ್ತು ಏನಾದರೂ ಒಂದುವೇಳೆ ಗ್ರಾಮಗಳಲ್ಲಿ ಮೈಷ ಮ್ಯವಿದ್ದರೆ ಆಗದಿರುವವನು ಇನ್ನೊಬ್ಬನ ಜಾಗದಲ್ಲಿ ಸಾರಾಯಿತಂದಿಟ್ಟು ಕೇಸು ಹಾಕಿಸುತ್ತಾನೆ. ಅಲ್ಲದೆ ಆಲ್ಕೋಹಾಲ್ ಮಿಶ್ರವಾದ ಬೇರೆ ಪದಾರ್ಥಗಳನ್ನು ಯಾರ ಮನೆಯಲ್ಲಾದರೂ ಯಾವುದಾದರೂ ಕೆಲಸಕ್ಕೆ ಇಟ್ಟುಕೊಂಡಿದ್ದರೆ ಅಂಥವರು ಈ ಸಂದರ್ಭದಲ್ಲಿ ಶಿಕ್ಷೆಗೆ ಗುರಿಯಾಗಿದ್ದಾರೆ. ಚಿಕ್ಕಮಗಳೂರು ಡಿಸ್ಟ್ರಿಕ್ ಕೊಪ್ಪಾದಲ್ಲಿ ಮರಕ್ಕೆ ಹಾಕಲು ವಾರ್ನಿಷ್ ತಯಾರಿ ಸುವ ಕಡೆ 'ಆಲ್ಕೋಹಾಲ್ ಇದೆ, ಅದು ಪರಾಬಿಗೆ ಸಂಬಂಧಪಟ್ಟಿದೆ' ಎಂದು ಅದನ್ನು ಪರೀಕ್ಷಿಸಿದ ಮೇಲೆ ಶೇಕಡ ಐದರಷ್ಟು ಆಲ್ಕೋಹಾಲ್ ಇರುವುದುಗೊತ್ತಾಗಿ ಸಂಬಂಧಪಟ್ಟವರಿಗೆ ಮ್ಯಾಜಿಸ್ಟ್ರೇಟರು ಸೂಕ್ತ ಶಿಕ್ಷೆ ವಿಧಿಸಿದರು. ಈ ರೀತಿಯಾಗಿ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಈ ತರಹ ಕೇಸುಗಳು ದಾಖಲಾಗಿ ಅನೇಕ ಜನರಿಗೆ ಅನುಕೂಲಕ್ಕೆ ಬದಲಾಗಿ ಪಾನನಿರೋಧದಿಂದ ಅನಾನುಕೂಲವಾಗಿದೆ. ಆಹಾರ ಧಾನ್ಯ ಮುಂತಾ ದುವುಗಳಮೇಲೆ ಕಂಟ್ರೋಲಿದ್ದಾಗ ಜನರು ಹೇಗೆ ಕಷ್ಟ ಪಟ್ಟರೋ ಅವರ ನೈತಿಕ ಮತ್ತು ಧಾರ್ಮಿಕ ನೀತಿ ಎಷ್ಟು ಕೆಳಮಟ್ಟಕ್ಕೆ ಇಳಿದಿತ್ತೊ ಲಂಚ ರುಷುವತ್ತಿ ನಿಂದ ನೀತಿ ಎಷ್ಟು ಕೆಳಮಟ್ಟಕ್ಕೆ ಇಳಿದಿತ್ತೊ ಅದೇ ರೀತಿಯಲ್ಲಿ ಈಗ ಪಾನನಿರೋಧ ನೀತಿಯ ಫಲವಾಗಿ ಅದರ ದ್ವಿಗುಣ ಕಷ್ಟಪಡಬೇಕಾಗಿದೆ; ಆಗ ಆಹಾರ ಪದಾರ್ಥಗಳನ್ನು ಹೇಗೆ ಸಾಗಿಸುತ್ತಿದ್ದರೋ ಹಾಗೆ ಈಗ ಕಳ್ಳಬಟ್ಟಿ ಸಾರಾಯಿ ಇಳಿಸುವುದನ್ನು ಜನರು ಕಲಿಯುತ್ತಿದ್ದಾರೆ. ಇದೇ ಸಮಯದಲ್ಲಿ ಹತೋಟಿಯ ದ್ದಾಗ ಬ್ಲಾಕ್‌ಮಾರ್ಕೆಟ್‌ನಲ್ಲಿ ಸಂಪಾದಿಸಿದಂತೆ ಕೆಲ ವರು ಹಣ ಸಂಪಾದಿಸುತ್ತಿದ್ದಾರೆ. ಪೋಲೀಸಿನವರು ಕೆಲವು ಜನರೊಂದಿಗೆ ಒಪ್ಪಂದಮಾಡಿಕೊಂಡು ತಿಂಗ ಳಿಗೆ ಇಷ್ಟು ರೂಪಾಯಿ ಕೊಡಬೇಕೆಂದು ಹೇಳಿ ಅದ ರಂತೆ ತೆಗೆದುಕೊಂಡು ಕಳ್ಳಬಟ್ಟಿ ಇಳಿಸುವುದು ವಗೈ ರೆಗೆ ಉತ್ತೇಜನ ನೀಡುತ್ತಿದ್ದಾರೆ. ಸರ್ಕಾರದವ ರೇನೋ ತಿಂಗಳಿಗೆ ಇಷ್ಟು ಕೇಸುಗಳನ್ನು ಹಾಕಬೇ ಕೆಂದು ಕಾನೂನು ಮಾಡಿದ್ದಾರೆ. ಆದರೆ ಅಷ್ಟು ಕೇಸು ಹಾಕಿ ಉಳಿದ ನಂದರ್ಭಗಳಲ್ಲಿ ದುಡ್ಡು ಗಳಿಸುತ್ತಿ ದ್ದಾರೆ. ಸರ್ಕಾರದವರು ಒಳ್ಳೆಯ ಉದ್ದೇಶದಿಂದ ಕಾನೂನು ಮಾಡಿದ್ದರೂ ಜನರಿಗೆ ಬೇರೊಂದು ಅಭಿ ಪ್ರಾಯ ಮೂಡುತ್ತಿದೆ. ಪಾನನಿರೋಧ ಇರುವಲ್ಲಿ ಹೆಂಡ ಇಳಿಸಲು ಅವಕಾಶ ಕೊಟ್ಟಿದ್ದಾರೆ. ಅಲ್ಲಿನ ಜನ ಕುಡಿದು ನಿರೋಧವಿರುವ ಎಲ್ಲೆಯೊಳಗೆ ಒಂದು ಹೆಜ್ಜೆ ಯಿಟ್ಟರೂ ಸಹ ಪೋಲೀಸ್ ಅಧಿಕಾರಿಗಳ ಕೈಗೆ ಸಿಕ್ಕು ತ್ತಾರೆ. ಮೊನ್ನೆ 28 ಜನ ಒಡ್ಡರು ಜಾವಗಲ್ಲಿನಲ್ಲಿ ಕುಡಿದು ಘುಂದಕ್ಕೆ ಕಾಲಿಟ್ಟಕೂಡಲೆ ಪೋಲೀಸರ ವಶಕ್ಕೆ ಸಿಕ್ಕಿ ರಾತ್ರಿಯೆಲ್ಲಾ ಉಪವಾಸ ಸ್ವೇಷ್ಣನಲ್ಲಿದ್ದು, ಆಮೇಲೆ ಜೈಲಿಗೆಹೋದರು. ಹೀಗೆ ಜನರಿಗೆ ತಿಳಿದು ಅಥವಾ ತಿಳಿಯದೆ ನಾನಾತರಹ ತೊಂದರೆ ಪ್ರಾಪ್ತವಾ ಗಿದೆ. ಈ ರೀತಿಯಾಗಿ ಜನರಲ್ಲಿ ನಾನಾ ತರಹವಾಗಿ ನೀತಿಯಮಟ್ಟ ಕೆಳಕ್ಕೆ ಇಳಿಯುತ್ತಿರುವುದರಿಂದ ಸರ್ಕಾರ ಸರಿಯಾದ ನೀತಿಯನ್ನನುಸರಿಸುವುದು ಅವ ಶ್ಯಕ. ಹಳ್ಳಿಗಳಲ್ಲಿ ಜನರು ಚಿಕ್ಕಮಗಳೂರಿಗೇಕೆ ಈ ರೂಲ್ಸ್, ಬೆಂಗಳೂರಿಗೆ ಏಕಿಲ್ಲ ಎಂದು ಕೇಳುತ್ತಾರೆ. ಅದಕ್ಕೆ ಉತ್ತರ ಹೇಳಲು ನಮಗೆ ತಿಳಿಯುವುದಿಲ್ಲ. ಮಂತ್ರಿಗಳು ಇರುವ ಬೆಂಗಳೂರಿನಲ್ಲಿ ಬೇಕಾದಹಾಗೆ ಕುಡಿಯಬಹುದು; ತಯಾರಿಸಬಹುದು, ಚಿಕ್ಕಮಗಳೂರಿ ನಲ್ಲೇಕೆ ಈ ಕಾನೂನು, ನಿರೋಧ, ನಿರ್ಬಂಧಮಾಡಿ ನಮ್ಮ ಪ್ರಾಣ ತಿನ್ನುತ್ತಾರೆ ಎಂದು ಜನರು ಕೇಳು ತ್ತಾರೆ; ಅದಕ್ಕೆ ಉತ್ತರಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ದೇಶದ ಹಿತದೃಷ್ಟಿಯಿಂದ ಜನರಿಗೆ ಅನು ಕೂಲವಾಗುವಂತೆ ಈ ನಿರ್ಣಯವನ್ನು ನಾನು ತಂದಿ ದ್ದೇನೆ. ಇದರಂತೆ ಪಾನನಿರೋಧವನ್ನು ಪ್ಯೊನೂರು ದೇಶದಲ್ಲೆಲ್ಲಾ ಸಂಪೂರ್ಣವಾಗಿ ಜಾರಿಗೆ ತರಬೇಕು. ಪಾನನಿರೋಧ ಮಾಡುವುದರಿಂದ ಸಂಸ್ಥಾನದ ಉತ್ಪತ್ತಿ ಖೋತಾ ಆಗುತ್ತದೆಂದು ಸೇಲ್ಸ್‌ಟ್ಯಾಕ್ಸನ್ನು ಪಾನ ನಿರೋಧವನ್ನು ಜಾರಿಗೆ ತಂದಾಗ ಹಾಕಲಾಯ್ತು. ಆ ತೆರಿಗೆಯನ್ನು ಸಂಸ್ಥಾನಾಮಳೆ ವಸೂಲುಮಾಡು ತ್ತಿದೆ. ಆದ್ದರಿಂದ ಒಂದು ಕಡೆ ಪಾನನಿರೋಧವನ್ನು ಜಾರಿಗೆತಂದು ಇನ್ನೊಂದು ಕಡೆ ಜಾರಿಗೆತರದಿರುವುದು ಸರಿಯಲ್ಲ. ಜನರ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿ ಯಿಂದ ಸರ್ಕಾರದವರು ಸಂಸ್ಥಾನದಲ್ಲೆಲ್ಲಾ ಪೂರ್ಣ ವಾಗಿ ಪಾನನಿರೋಧವನ್ನು ಜಾರಿಗೆತರಬೇಕೆಂದು ಪ್ರಾರ್ಥಿಸಿ ಈ ನಿರ್ಣಯವನ್ನು ಸಭೆಯ ಮುಂದಿಡು ತ್ತೇನೆ.

Mr. SPEAKER.—Resolution moved :

"That this Assembly is of the opinion that prohibition be extended to other wet districts in the State."

There is an amendment by Sri B. Hutche Gowda.

11 A.M.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಾನು ಸೂಚಿಸಬೇಕೆಂದಿರುವ ತಿದ್ದುಪಡಿ ಈ ರೀತಿ ಇದೆ; ಅದನ್ನು ಮಂಡಿಸುತ್ತೇನೆ.

"That the words and figures 'from 1st July 1954' may be added at the end of the resolution".

ನನ್ನ ತಿದ್ದುಪಡಿಯನ್ನು ಸೇರಿಸಿದರೆ ನಿರ್ಣಯವು ಈ ರೀತಿ ಆಗುತ್ತದೆ:

"This Assembly is of the opinion that prohibition be extended to other wet districts in the State from 1st July 1954 ".

ಸ್ವಾಮಿ, ಶ್ರೀಮತಿ ಸುಬ್ಬಮ್ಮನವರು ತಂದಿರತಕ್ಕ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ, ಅದಕ್ಕೆ ಈ ನನ್ನ ತಿದ್ದುಪಡಿಯು ಸಹ ಸೇರಿದರೆ ಮತ್ತಷ್ಟು ಪರಿಪೂರ್ಣಗೊಳ್ಳುತ್ತದೆಂದು ನನ್ನ ಅಭಿಪ್ರಾಯ. ಈ ಪಾನನಿರೋಧ ಕಾನೂನು ಜಾರಿಗೆ ಬಂದಲಾಗಾಯ್ತು ಅದರಲ್ಲಿರುವ ದೋಷಗಳನ್ನು ನಾವು ಮೊದಲನಿಂದಲೂ ಹೇಳುತ್ತಲೇ ಬಂದಿದ್ದೇವೆ. ಪಾನನಿರೋಧ ದೇಶದ ಬಡಜನರ ಹಿತದೃಷ್ಟಿಯಿಂದ ಬಹಳ ಒಳ್ಳೆಯದು, ಅದನ್ನು ಸಂಸ್ಥಾನಾದ್ಯಂತ ಪೂರ್ಣವಾಗಿ ಜಾರಿಗೆ ತರಬೇಕೆಂದು ಅನೇಕ ವರ್ಷಗಳಿಂದ ನಭೆಯಲ್ಲಿ ಸೂಚಿತವಾಗಿದೆ. ಅದಕ್ಕನುಸಾರವಾಗಿ ಕಾಂಗ್ರೆಸ್ ಸರ್ಕಾರ ಸಂಪೂರ್ಣವಾಗಿ 1948ರಲ್ಲಿ ಮೂರು ಡಿಸ್ಟ್ರಿಕ್ಟ್‌ಗಳಲ್ಲಿ ಜಾರಿಗೆ ತಂದರು. ಮೊದಲು ಈ ಪದ್ಧತಿಯನ್ನು ಐದು ವರ್ಷದಲ್ಲಿ ಸಂಪೂರ್ಣವಾಗಿ ಜಾರಿಗೆ ತರುವ ಬಗ್ಗೆ ಒಂದು ಯೋಜನೆ ತಯಾರಾಗಿದ್ದು, ಅನಂತರ ಅದು ಬದಲಾವಣೆಗೊಂಡು, ಕ್ರಮ ಕ್ರಮವಾಗಿ ಇದನ್ನು ಆಚರಣೆಗೆ ತರಬೇಕೆಂದು ಒಂದು ವರ್ಷಕ್ಕೆ ಮೂರು ಡಿಸ್ಟ್ರಿಕ್ಟಿನ ಪ್ರಕಾರ ಮೂರು ವರ್ಷಗಳಲ್ಲಿ ಈ ಪದ್ಧತಿಯನ್ನು ಸಂಸ್ಥಾನಾದ್ಯಂತ ಜಾರಿಗೆ ತರುವ ಯೋಜನೆಯನ್ನು ಹಾಕಿಕೊಂಡರು.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).— ಈಗ ನಿಮ್ಮ ತಿದ್ದುಪಡಿಯ ಉದ್ದೇಶವೇನು ?

ಶ್ರೀ ಬಿ. ಹುಚ್ಚೇಗೌಡ.— ಪಾನನಿರೋಧವನ್ನು ಸಂಪೂರ್ಣವಾಗಿ ಇತರ ಡಿಸ್ಟ್ರಿಕ್ಟ್‌ಗಳಲ್ಲಿಯೂ ಜಾರಿಗೆ ತರಬೇಕೆಂಬುದು.

ಶ್ರೀ ಕೆ. ಹನುಮಂತಯ್ಯ.— ಅದನ್ನು ನಿರ್ಣಯದ ಸೂಚಕರೇ ಸೂಚನೆ ಮಾಡಿರುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.— 1954ನೆಯ ಇಸವಿ ಜುಲೈ ಒಂದನೆಯ ತಾರೀಖಿನಿಂದಲೇ ಜಾರಿಗೆ ತರಬೇಕೆಂಬುದು ನನ್ನ ತಿದ್ದುಪಡಿಯ ಉದ್ದೇಶ.

ಶ್ರೀ ಕೆ. ಹನುಮಂತಯ್ಯ.— ಅದು ಸಾಧ್ಯವೇ ?

ಶ್ರೀ ಬಿ. ಹುಚ್ಚೇಗೌಡ.— ನನಗೆ ಸಾಧ್ಯವೆಂದು ತೋರುತ್ತದೆ. ಮೊದಲು ಮೂರು ಡಿಸ್ಟ್ರಿಕ್ಟ್‌ಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದಾಗ 1948ರಲ್ಲಿ ಸರ್ಕಾರದವರು ಈ ವಿಚಾರದಲ್ಲಿ ತಮ್ಮ ಕಾರ್ಯ ಯೋಜನೆಯ ಬಗ್ಗೆ ಅತ್ಯಂತ ಉತ್ಸಾಹದಿಂದ ಕೂಡಿದ್ದರು. ಇನ್ನೇನು ಸಂಸ್ಥಾನಾದ್ಯಂತ ಪಾನನಿರೋಧ ಪೂರ್ಣವಾಗಿ ಜಾರಿಗೆ ಬಂದುಬಿಡುತ್ತದೆಂದು ಆಗ ಜನರೂ ಸಹ ಉತ್ಸಾಹಭರಿತರಾಗಿದ್ದರು. ಅವರ ಕಾರ್ಯ ಯೋಜನೆಯ ಪ್ರಕಾರವೇ 1948ನೆಯ ಜುಲೈನಲ್ಲಿ ಮೂರು ಡಿಸ್ಟ್ರಿಕ್ಟ್‌ನಲ್ಲಿ, 1949ನೆಯ ಜುಲೈನಲ್ಲಿ ಇನ್ನು ಮೂರು ಡಿಸ್ಟ್ರಿಕ್ಟ್‌ನಲ್ಲಿ, 1950ನೆಯ ಜುಲೈನಲ್ಲಿ ಇನ್ನುಳಿದ ಮೂರು ಡಿಸ್ಟ್ರಿಕ್ಟ್‌ನಲ್ಲಿ— ಈ ರೀತಿ ಮೂರು ವರ್ಷದಲ್ಲಿ ಸಂಸ್ಥಾನಾದ್ಯಂತವೂ ಈ ಪಾನನಿರೋಧ ಜಾರಿಗೆ ಬಂದು ಬಿಡುತ್ತದೆಯೆಂಬ ಪೂರ್ಣ ಭರವಸೆಯನ್ನು ಜನತೆ ಇಟ್ಟುಕೊಂಡಿತ್ತು. ಆದರೆ ಈ ಭರವಸೆಯು ನಿರಾಶೆಗೊಂಡು ಇನ್ನೆರಡು ಡಿಸ್ಟ್ರಿಕ್ಟ್‌ಗಳಲ್ಲಿ ಮಾತ್ರ ಸರ್ಕಾರದವರು ಇದನ್ನು ಜಾರಿಗೆ ತಂದು ಇನ್ನುಳಿದ ನಾಲ್ಕು ಡಿಸ್ಟ್ರಿಕ್ಟ್‌ಗಳಲ್ಲಿ ಇದು ವರೆಗೆ ಜಾರಿಗೆ ತಂದಿಲ್ಲ. ಇದರಿಂದ ದೇಶದಲ್ಲಿನ ಎಷ್ಟೋ ಮಂದಿ ಜನರ ನಿರೀಕ್ಷಣೆಗೆ ಭಂಗವಾಗಿದೆ, ಅಲ್ಲದೆ ಇದರಿಂದ ಬಹಳ ಜನರು ತೊಂದರೆಗೂ ಈಡಾಗಿದ್ದಾರೆಂಬುದನ್ನು ಶ್ರೀಮತಿ ಸುಬ್ಬಮ್ಮನವರು ಈಗಾಗಲೇ ತಿಳಿಸಿದ್ದಾರೆ. ನಮ್ಮ ದೇಶದ ನೆರೆಹೊರೆಯ ಪ್ರಾಂತ್ಯಗಳಲ್ಲಿ, ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿ, ಈ ಬಾಬಿನಿಂದ ಕೋಟ್ಯಾಂತರ ರೂಪಾಯಿಗಳ ಉತ್ಪತ್ತಿ ಬರುತ್ತಿದ್ದುದನ್ನು ಗಣನೆಗೆ ತೆಗೆದುಕೊಳ್ಳದೆ ದೇಶದ ಹಿತದೃಷ್ಟಿಯಿಂದ ಮತ್ತು ಜನತೆಯ ಹಿತದೃಷ್ಟಿಯಿಂದ ಅವರು ಈ ಪಾನನಿರೋಧವನ್ನು ಬಹಳ ಯಶಸ್ವಿಯಾಗಿ ಜಾರಿಗೆ ತಂದಿರುತ್ತಾರೆ. ಈ ಬಗ್ಗೆ ಅವರಿಗೆ ಉಂಟಾಗುವ ನಷ್ಟವನ್ನು ಬೇರೆ ರೂಪದಲ್ಲಿ ಬರಮಾಡಿಕೊಳ್ಳಲು ಅವರು ನಾನಾ ಮಾರ್ಗಗಳನ್ನು ಕಲ್ಪಿಸಿಕೊಂಡಿರುತ್ತಾರೆ. ನಮ್ಮ ಸರ್ಕಾರದವರು ಈಗ ಐದು ಡಿಸ್ಟ್ರಿಕ್ಟ್‌ಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದಿರುವ ಪರಿಣಾಮವಾಗಿ ಕಡಮೆ ಬಿದ್ದಿರುವ ವರಮಾನವನ್ನು ಸರಿದೂಗಿಸಿಕೊಳ್ಳಲು ಸೇಲ್ಸ್ ಟ್ಯಾಕ್ಸ್ ಎಂಬ ಹೊಸ ತೆರಿಗೆಯನ್ನು ವಿಧಾಯಕ ಮಾಡಿದರು. ಇದರಿಂದ ಜನರಿಗೆ ತೊಂದರೆಯಾದರೂ ಪರವಾಗಿಲ್ಲ, ಪಾನನಿರೋಧ ಸಂಸ್ಥಾನದಾದ್ಯಂತ ಜಾರಿಗೆ ಬರುತ್ತದೆಯೆಂಬ ಆಶೆ ಆಕಾಂಕ್ಷೆಯಿಂದ ನಭೆಯು ಈ ಹೊಸ ತೆರಿಗೆಯನ್ನು ಒಪ್ಪಿಕೊಂಡಿತು. ಇದರಿಂದ ಸಂಸ್ಥಾನಕ್ಕೆ ಈಗ ಬೇಕಾದಷ್ಟು ಉತ್ಪತ್ತಿ ಬರುತ್ತಿದೆ. ಸಂಸ್ಥಾನದ ನಾನಾ ಬಾಬುಗಳಿಂದ ಬರತಕ್ಕ ವರಮಾನವನ್ನೆಲ್ಲಾ ಕ್ರೋಢೀಕರಿಸಿಕೊಂಡು ಆದಳಿತ ಖರ್ಚು ವೆಚ್ಚದಲ್ಲಿ ಮಿತವ್ಯಯ ನೀತಿಯನ್ನನುಸರಿಸಿದ ಪಕ್ಷದಲ್ಲಿ, ಸರ್ಕಾರದವರಿಗೆ ಈ ಪಾನನಿರೋಧದಿಂದ ವರಮಾನ ಕಡಮೆಯಾಗುವುದನ್ನು ಭರ್ತಿಮಾಡಿಕೊಳ್ಳುವುದು ಕಷ್ಟವಾಗುವುದಿಲ್ಲ. ಈ ವಿಚಾರದಲ್ಲಿ ನೆರೆ ಹೊರೆಯ ಪ್ರಾಂತ್ಯಗಳ ಸರ್ಕಾರದವರು ಎಷ್ಟರಮಟ್ಟಿಗೆ ಕಡ್ಡಾಯವಾಗಿ ಸರ್ವತ್ರ ಒಂದೇಸಾರಿ ಪಾನನಿರೋಧವನ್ನು ಜಾರಿಗೆ ತಂದರು ಎಂಬುದನ್ನೂ ನಮ್ಮ ಸರ್ಕಾರದವರು ಗಣನೆಗೆ ತೆಗೆದುಕೊಳ್ಳದೆ ಈಗ ನಾಲ್ಕು ವರ್ಷಗಳಿಂದ—1949 ರಿಂದ—ಈ ಬಗ್ಗೆ ಒಂದು ಹೆಜ್ಜೆ ಸಹ ಮುಂದುವರಿಯದೆ ಇರುವುದು ಜನತೆಗೆ ನಿರಾಶೆಯನ್ನುಂಟು ಮಾಡಿದೆ. ಇದರಿಂದ ಸರ್ಕಾರದವರು ಬಡವರ ವಿಚಾರದಲ್ಲಿ ಎಳ್ಳಷ್ಟೂ ಸಹ ಕನಿಕರ ಇಟ್ಟಿಲ್ಲವೆಂದು ಸ್ಪಷ್ಟಪಡುತ್ತದೆ ಮೊದಲನಿಂದಲೂ ಸಹ ಕಾಂಗ್ರೆಸ್ ಪಾರ್ಟಿಯವರು ಸಂಸ್ಥಾನದಲ್ಲಿ ಪಾನನಿರೋಧವನ್ನು ಸಂಪೂರ್ಣವಾಗಿ ಆಚರಣೆಗೆ ತರುವುದೇ ಅವರ ಮುಖ್ಯ ಗುರಿಯೆಂದು ಆತತ್ವವನ್ನೇ ತಮ್ಮ ಚುನಾವಣೆಯ ಪ್ರಚಾರದ ಮುಖ್ಯ ಧ್ಯೇಯವನ್ನಾಗಿಟ್ಟುಕೊಂಡು ಜನರನ್ನು ನಂಬಿಸಿಕೊಂಡೇ ಬಂದಿರುತ್ತಾರೆ. ಆದರೆ ಆ ನಂಬಿಕೆಗೆ ಎಷ್ಟು ಮಾತ್ರ ಅವರು ಇಂದು ಅರ್ಹರೆನ್ನಿಸಿಕೊಂಡಿದ್ದಾರೆ ಎಂಬುದನ್ನು ಅವರೇ ಗಮನಿಸಬೇಕು. ಈ ಕುಡಿತದ ಹಾವಳಿಗೆ ಸಿಕ್ಕಿ ಹಲವಾರು ಸಂಸಾರಗಳು ಹಾಳಾಗಿ, ಅನೇಕ ಅನಾಹುತಗಳಾಗಿರುವುದನ್ನು ಸರ್ಕಾರದವರು ಈ ದಿನ ಇದೇ ಬೆಂಗಳೂರಿನಲ್ಲಿಯೇ ನೋಡಬಹುದು. ಸರ್ಕಾರದ ಇಂದಿನ ಪಾನನಿರೋಧ ನೀತಿ ಅತಿ ವಿಚಿತ್ರವಾಗಿದೆ. ಇಲ್ಲಿಂದ ನೆಲಮಂಗಲಕ್ಕೆ ಹೋಗಿ ಅಲ್ಲಿ ಕುಡಿದು ಅಲ್ಲಿಂದ ತುಮಕೂರು ಬಾರ್ಡರ್‌ಗೆ ಹೋಗಿ ಶಿಕ್ಷೆಗೆ ಒಳಗಾದವರಿದ್ದಾರೆ. ಅಲ್ಲಿಂದ ಇನ್ನು 30 ಮೈಲಿ ದೂರ ಅರಸೀಕೆರೆಗೆ ಹೋದರೆ ಕುಡಿಯಬಹುದು. ಹೀಗೆಯೇ routeನಲ್ಲಿ ಜನರಿಗೆ

(ಶ್ರೀ ಬಿ. ಹುಚ್ಚೇಗೌಡ.)

ಅಲ್ಲಲ್ಲಿ ಕುಡಿಯಲು ಅನುಕೂಲತೆಗಳಿವೆ. ಇಷ್ಟೇ ಅಲ್ಲದೆ, ಒಬ್ಬ ಮನುಷ್ಯನಿಗೆ ಈ ಬಗ್ಗೆ ಇರುವ ಚಟವನ್ನು ನಿವಾರಿಸಿಕೊಳ್ಳಲು ಕಳ್ಳತನದಿಂದಲೂ ಮತ್ತು ಬೇರೆ ವಿಧದಲ್ಲೂ ಕುಡಿತಕ್ಕೆ ಅನುಕೂಲ ಕಲ್ಪಿಸಿದೆ. ಸರ್ಕಾರದವರು ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಮುಂಚೆ ಒಂದು ಕೋಟಿ ಎಪ್ಪತ್ತು ಲಕ್ಷ ರೂಪಾಯಿ ಉತ್ಪತ್ತಿ ಇತ್ತು. ಪಾನನಿರೋಧವನ್ನು ಐದು ಡಿಸ್ಟ್ರಿಕ್ಟ್‌ನಲ್ಲಿ ಜಾರಿಗೆ ತಂದು ಇನ್ನುಳಿದ ನಾಲ್ಕು ಡಿಸ್ಟ್ರಿಕ್ಟ್‌ನಲ್ಲಿ ತರದೇ ಇದ್ದುದರ ಪ್ರಯುಕ್ತ ಈಗ ಎರಡು ಕೋಟಿ ಚಿಲ್ಲರೆ ಉತ್ಪತ್ತಿ ಇದೆ. ಪಾನನಿರೋಧವನ್ನು ಜಾರಿಗೆ ತಂದಿರುವ ಪ್ರದೇಶಕ್ಕೆ ಸಮೀಪದ ಅಕ್ಕ ಪಕ್ಕದ ಸ್ಥಳಗಳಲ್ಲಿ ಅಂಗಡಿಗಳನ್ನು ತೆರೆದಿರುವುದರಿಂದ ಸರ್ಕಾರದವರೇ ಅಪ್ರತ್ಯಕ್ಷವಾಗಿ ಈ ಕುಡಿತಕ್ಕೆ ಪ್ರೋತ್ಸಾಹ ಕೊಟ್ಟಂತಾಗಿದೆ. ಇದರಿಂದ ಈಗಿನ ಸರ್ಕಾರ ಯಾವ ತತ್ವಕ್ಕೆ ಬದ್ಧಕಂಕಣರಾಗಿ ದೇಶದ ಆಡಳಿತ ಸೂತ್ರವನ್ನು ವಹಿಸಿದರೋ ಆ ಸರ್ಕಾರ ದೇಶದ ಜನತೆಯನ್ನು ನಡು ನೀರಿನಲ್ಲಿ ಕೈಬಿಟ್ಟಂತಾಗಿದೆ. ಈಗ ಸರ್ಕಾರಕ್ಕೆ ಇರುವುದು ಒಂದೇ ದಾರಿ. ಅವರಿಗೆ ಧೈರ್ಯವಿದ್ದರೆ ಸಂಸ್ಥಾನಾದ್ಯಂತ ಪಾನನಿರೋಧವನ್ನು ಜಾರಿಗೆ ತರುತ್ತೇವೆಂದು ಹೇಳಿ ಅವರ ತತ್ವಕ್ಕೆ ಅನುಸಾರವಾಗಿ ನಡೆದುಕೊಳ್ಳಲಿ, ಹಾಗಿಲ್ಲದಿದ್ದರೆ ಅವರು ಆ ರೀತಿ ಮಾಡಲು ಅಸಮರ್ಥರು ಎಂದು ಧೈರ್ಯವಾಗಿ ಒಪ್ಪಿಕೊಂಡು ಸಂಸ್ಥಾನಾದ್ಯಂತವೂ ಈ ಕುಡಿತಕ್ಕೆ ಅವಕಾಶ ಕಲ್ಪಿಸಿಬಿಡಲಿ. ಸಂಸ್ಥಾನಾದ್ಯಂತವೂ ಒಂದೇ ನೀತಿಯನ್ನು ಸರ್ಕಾರದವರು ಅನುಸರಿಸಬೇಕು, ಹಾಗಿಲ್ಲದೆ ಸಂಸ್ಥಾನದ ಒಂದು ಭಾಗದಲ್ಲಿ ಒಂದು ವಿಧವಾದ ನೀತಿ ಇನ್ನೊಂದು ಭಾಗದಲ್ಲಿ ಬೇರೆ ವಿಧವಾದ ನೀತಿ ಅನುಸರಿಸಿದರೆ ಅದು ಸರ್ಕಾರಕ್ಕೆ ಗೌರವ ತರತಕ್ಕುದಲ್ಲ.

ಕುಡಿತಕ್ಕೆ ಸಿಕ್ಕಿದವರನ್ನ ಹಿಡಿಯುವ ವಿಚಾರದಲ್ಲಿ ಪೋಲೀಸಿನವರಂತೂ ವಿಚಿತ್ರವಾಗಿ ವರ್ತಿಸುತ್ತಾರೆ. ಕೆಲವು ಪ್ರದೇಶಗಳಲ್ಲಿ ಕುಡಿತದ ಅವಕಾಶವಿದ್ದೂ, ಇನ್ನು ಕೆಲವು ಪ್ರದೇಶಗಳಲ್ಲಿ ಕುಡಿತಕ್ಕೆ ಅವಕಾಶವಿಲ್ಲದ ಗಡೀ ಪ್ರದೇಶದಲ್ಲಿ ಈ ಪೋಲೀಸಿನವರಿದ್ದೂ ಅಲ್ಲಿ ಬಂದವನನ್ನು 'ಬಾಯಿತೆಗೆ, ವಾಸನೆ ನೋಡುತ್ತೇನೆ' ಎಂದು ಹೇಳಿ ಪರೀಕ್ಷೆಗೆ ಗುರಿಪಡಿಸುತ್ತಾರೆ. ಅಂಥ ಸಮಯದಲ್ಲಿ ಕೆಲವರು ಈ ಪೋಲೀಸಿನವರಿಗೇ ಬುದ್ಧಿ ಕಲಿಸಬೇಕೆಂದು ಉಗಿದು ಬಿಡುತ್ತಾರೆ; ಇದೂ ಒಂದು ಕೇಸು! ಇಂಥ ಪ್ರಸಂಗಗಳು ನಿತ್ಯವೂ ನಡೆಯುತ್ತಿರುತ್ತವೆ. ಈ ರೀತಿ ಸರ್ಕಾರದ ಆ ಅರ್ಧಂಬರ್ಧ ನೀತಿಯಿಂದ ಜನರಿಗೆ ಇಲ್ಲದ ಕಿರುಕುಳ ಪ್ರಾಪ್ತಿಯಾಗಿದೆ. ಕಾಂಗ್ರೆಸಿನ ಮೂಲ ಪುರುಷರಾದ ಮಹಾತ್ಮಾ ಗಾಂಧಿಯವರು ಬಡ ಜನರು ಉದ್ಧಾರವಾಗಲಿ ಎಂಬ ಮಹತ್ವಾಕಾಂಕ್ಷೆಯಿಂದ ಈ ಪಾನನಿರೋಧವನ್ನು ಭಾರತಾದ್ಯಂತ ಜಾರಿಗೆ ತೆಗೆದುಕೊಂಡು ಬನ್ನಿ ಎಂದು ಸಾರಿ ಹೇಳಿದರು. ಈಗ ಅದಕ್ಕೆ ವ್ಯತಿರಿಕ್ತವಾಗಿ ಹೋಗತಕ್ಕ ಸರ್ಕಾರದ ನೀತಿ ಸರಿಯಲ್ಲ. ಈ ವಿಚಾರದಲ್ಲಿ ನೆರೆಹೊರೆಯ ಪ್ರಾಂತಗಳ ಸರ್ಕಾರದವರು ಧೈರ್ಯದಿಂದ ಮುನ್ನುಗ್ಗಿ ಒಂದೇ ವಿಧವಾದ ನೀತಿಯನ್ನು ಅನುಸರಿಸಿ ಈ ಪಾನನಿರೋಧವನ್ನು ಜಾರಿಗೆ ತಂದಿರುತ್ತಾರೆಂಬುದನ್ನು ಮನಗಾಣಬೇಕು. ಸಾಧ್ಯವಾದಷ್ಟು illicit tappingನ್ನು ತಪ್ಪಿಸಬೇಕು. ಸಾಮಾನ್ಯ ಜನರ ನೀತಿಯ ಮಟ್ಟವನ್ನು ಹೆಚ್ಚಿಸಲು ಪಾನನಿರೋಧ ಕಾರ್ಯವನ್ನು ಸಂಸ್ಥಾನಾದ್ಯಂತ ಯಶಸ್ವಿಯಾಗಿ ಕೈಕೊಳ್ಳಬೇಕು. ಕುಡಿತದ ಬಾಬಿನಿಂದ ಸರ್ಕಾರದ ಬೊಕ್ಕಸಕ್ಕೆ ಬರುತ್ತಿರುವ ಹಣ ಬಡವರ ರಕ್ತದ ಸುಲಿಗೆಯಿಂದ ಬಂದಿರತಕ್ಕುದು ಎಂಬುದನ್ನು ಸರ್ಕಾರದವರು ಅರಿಯಬೇಕು. ಒಟ್ಟಿನಲ್ಲಿ ಸರ್ಕಾರದವರು ಈಗ ಪಾನನಿರೋಧದ ವಿಚಾರದಲ್ಲಿ ಅನುಸರಿಸುತ್ತಿರುವ ಅಸಂಬದ್ಧ ನೀತಿಯನ್ನು ತ್ಯಜಿಸಿ ಧೈರ್ಯವಾಗಿ ಸಂಸ್ಥಾನಕ್ಕೆಲ್ಲಾ ಒಂದೇ ನೀತಿಯನ್ನಳವಡಿಸಿ ಈ ಪಾನನಿರೋಧವನ್ನು ಯಶಸ್ವಿಯಾಗಿ ಜಾರಿಗೆ ತರಬೇಕೆಂದು ಹೇಳಿ ಈ ನಿರ್ಣಯವನ್ನು ಮತ್ತು ನಾನು ಸೂಚಿಸಿರುವ ತಿದ್ದುಪಡಿಯನ್ನೂ ಹೃತ್ಪೂರ್ವಕವಾಗಿ ಅನುಮೋದಿಸಿ ಸಭೆಯ ಮುಂದಿಡುತ್ತೇನೆ.

Mr. SPEAKER.—Amendment moved :

> "That the words and figures 'from 1st July 1954' may be added at the end of the resolution."

Sri D. R. Kari Gowda has sent a similar resolution and he can speak on this resolution itself.

*ಶ್ರೀ ಡಿ. ಆರ್. ಕರಿಗೌಡ (ಹಾಸನ).—ಸ್ಪೀಮ್ಹಾ, ಇದೇ ವಿಚಾರಕ್ಕೆ ಸಂಬಂಧಿಸಿದ ಹಾಗೆ ನಾನೂ ಒಂದು ನಿರ್ಣಯವನ್ನು ತಂದಿರುತ್ತೇನೆ. ಅದು ಹಾಸನ ಜಿಲ್ಲೆಗೆ ಮಾತ್ರ ಅನ್ವಯಿಸುವುದಾಗಿದೆ. ಹಾಸನ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದು ಇನ್ನು ಕೆಲವು ತಾಲ್ಲೂಕುಗಳಲ್ಲಿ ಜಾರಿಗೆ ತರದೇ ಇರುವ ಸರ್ಕಾರದ ನೀತಿಯು ಹಾಸ್ಯಾಸ್ಪದವಾಗಿದೆ. ಒಂದು ಜಿಲ್ಲೆಯ ಆದ್ಯಂತವಾದರೂ ಒಂದೇ ವಿಧವಾದ ನೀತಿಯನ್ನು ಅನುಸರಿಸುವುದು ಯುಕ್ತವಾದುದು. ಹಾಸನ ಜಿಲ್ಲೆಯ ಬೇಲೂರು ಮತ್ತು ಸಕಲೇಶಪುರದಲ್ಲಿ ಜಾರಿಗೆತಂದಿದ್ದು ಅದೇ ಅರಸೀಕೆರೆಯಲ್ಲಿ ಜಾರಿಯಿಲ್ಲಲ್ಲದೇ ಇರುವುದರಿಂದ ಈ ಕುಡಿತದ ಅಭ್ಯಾಸವಿರುವವರು ಸಲೀಸಾಗಿ ಅಲ್ಲಿಗೆ ಹೋಗಿ ಕುಡಿಯಲು ಅವಕಾಶವಿವೆ. ಕಳೆದ ಸಾರಿ ಸಹ ಇದೇ ವಿಚಾರವನ್ನು ಗಮನಕ್ಕೆ ತಂದಿದ್ದೇನೆ. ಅದೇ ಪಶ್ಚಿಮದಲ್ಲಿ ಮದ್ರಾಸ್ ಪ್ರಾಂತಕ್ಕೆ ಸೇರಿದ ಸೌತ್ ಕೆನರಾ ಜಿಲ್ಲೆಯಲ್ಲಿ ಪಾನನಿರೋಧ ಜಾರಿಯಲ್ಲಿದೆ. ನಮ್ಮ ಸರ್ಕಾರದ ಪಾನನಿರೋಧದ ಈ ಅರೆಮನಸ್ಸಿನ ನೀತಿಯು ಜನರ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡುತ್ತದೆ. ಆದುದರಿಂದ ಸರ್ಕಾರದವರು ಹಾಸನ ಜಿಲ್ಲೆಯ ಉಳಿದ ತಾಲ್ಲೂಕುಗಳಲ್ಲಿ 1954ನೆಯ ಇಸವಿಯಿಂದ ಪಾನನಿರೋಧವನ್ನು ಪೂರ್ಣವಾಗಿ ಜಾರಿಗೆ ತರಬೇಕೆಂದು ಪ್ರಾರ್ಥನೆಮಾಡುತ್ತೇನೆ.

Sri R. ANANTARAMAN (Chamarajapet).—Sir, while supporting the Resolution sent by the Hon'ble Member, I wish to bring to thenotice of the House that I have sent Resolution No.67 which reads as follows :—

> "This Assembly is of the opinion that Prohibition should be introduced in Corporation Area of City of Bangalore from April 1954."

The other day I brought to the notice of this House the provision in the Constitution. No doubt the previous Ministry introduced Prohibition in

three or four districts expecting the new Ministry also to take up this question as early as possible. Of course there are certain difficulties in the way of the present Ministry, particularly regarding finance. But still I request the Government to be kind enough to see that Prohibition is at least gradually introduced from year to year so that by about five years from now, there will be total Prohibition in the State of Mysore. As regards Bangalore City, Sir, there is a huge floating population in Bangalore City ; because we see daily that the City is getting 8 to 10 families coming from neighbouring Madras Districts on account of the temptation of drinks available here. It has become a huge problem for the Corporation of Bangalore to solve the problem of growing population and consequent slums. The Government have not given any attention to this problem. In fact a Committee which was set up a few months back have also given this as the reason for the increasing population in Bangalore ; because Bangalore City is a wet area, more than ten families are coming into Bangalore City and it is not possible to control these slums. Four years back, the slums numbered about 60 and now hey have increased to 92 or 93. It has become very difficult for the Corporation to manage this.

Another thing I wish to bring to the notice of the Government, Sir, is : the previous Ministry had said that these liquor shops might be kept closed on the 10th of every month so that the labourers and sweepers mostly in Bangalore City who get their salaries on that day, may not go and spend all the money on drinks. Now-a-days such a rule has been given up and I have seen personally that labourers and wage earners, sweepers spending all their money on drink on their pay day and lose all their money and are reduced to penury. So it is very necessary, at least till we introduce Prohibition in Bangalore City, that these liquor shops should be closed on the 10th of every month.

Another representation was made to the Government that these toddy and arrack shops should be kept closed on the Republic Day and Mahatma Gandhi's Jayanthi Day. Representations were made to them last year and Government said that because they had already entered into contract, they would consider this point this year. I hope that the Government will consider the closing of all these shops on these days.

There is another point which I should bring to the notice of the Government. There are some toddy and arrack shops by the side of temples in the City of Bangalore. I am referring particularly to the one which is in the vicinity of Dharmarayaswamy Temple. Even on the *Karaga* Day you can see thousands of people drunk by the side of the Temple, while on the other side you see thousands of devotees entering the temple to offer worship. There are so many temples by the side of which there are many toddy shops. A representation from the people of respective localities and also the resolution of the Corporation have been sent up to the Government and the Government usually say that unless they find some other suitable place, it would not be possible to shift these shops. I do not think that such an argument is sustainable. Government must respect the wishes and sentiments of the people and the Corporation and do something in the matter. Otherwise, it will be a nuisance to the public at large. We see on the one hand pilgrims moving into the temple and at the same time we see people who have drunk lying on the footsteps of the temple. This is a great nuisance. The Hon'ble Ministers know about it. I therefore request the Government to take immediate action to see that these toddy shops are shifted and also prohibition is gradually introduced in our State. I would urge upon the Government to introduce prohibition in Bangalore City in the first instance so that poorer classes of people may be helped. Of course permits may be issued to the richer classes of people to get drinks and we have no objection. Let them drink if they like. But the poorer classes of people should be prohibited from drinking. I do not want to say

(SRI R. ANANTARAMAN.)

much, Sir, but request the Ministry to take up this question as early as possible. Thank you very much.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಅಧ್ಯಕ್ಷರೇ, ಈ ದಿವಸ ಶ್ರೀಮತಿ ಸುಬ್ಬಮ್ಮನವರು ತಂದಿರುವ ಈ ನಿರ್ಣಯವನ್ನು ಅನುಮೋದಿಸುತ್ತ ನಾಲ್ಕು ಮಾತುಗಳನ್ನು ಆಡಬೇಕೆಂದು ಇಷ್ಟಪಡುತ್ತೇನೆ. ಯಾತಕ್ಕೆಂದರೆ ಈ ತತ್ವ ನಮ್ಮ ದೇಶದಲ್ಲಿ ಇಪ್ಪೊತ್ತಿನದಲ್ಲ, ಎಂದೋ ಹಾಕಲಾಗಿದೆ ಮತ್ತು ಇದನ್ನು ಯಾರೇ ಆಗಲಿ ಹೇಳಿಕೊಡಬೇಕಾದದ್ದು ಅನಾವಶ್ಯಕ ಎಂದು ಹೇಳಿ ನನಗೆ ಅನಿಸುತ್ತದೆ. ಪೂಜ್ಯ ಬಾಪೂಜಿಯವರು ನಮ್ಮ ದೇಶ ಉದ್ಧಾರವಾಗಬೇಕಾದರೆ ಇದೇ ತಳಹದಿ, ಪಾನನಿರೋಧ ಮಾಡಬೇಕೆಂಬ ನೀತಿಯ ಮೇಲೆಯೇ ರಾಜ್ಯಸ್ಥಾಪನೆ ಮಾಡಬೇಕು, ಇದರಿಂದಲೇ ಜನಾಂಗ ಸುಧಾರಿಸಬೇಕು ಎಂದು ಹೇಳಿ ಒತ್ತಾಯ ಪಡಿಸಿದ್ದಾರೆ. ಅದಕ್ಕೆ ಧಕ್ಕೆ ಬರದಂತೆ ನಾವು ನಡೆದುಕೊಂಡು ಹೋಗಬೇಕಾದದ್ದು ನಮ್ಮ ಧರ್ಮ ಮತ್ತು ನೀತಿ. ಇದಕ್ಕೆ ಬೇಕಾದಂಥ ಕಾನೂನುಗಳನ್ನು ರಚಿಸಿಕೊಂಡು ಕಾರ್ಯಗತ ಮಾಡತಕ್ಕ ಸರ್ಕಾರದ ನೀತಿಗೆ ನಮ್ಮ ಒಪ್ಪಿಗೆ ಇದೆಯೇ ಹೊರತು ಇಲ್ಲದೇ ಇದ್ದರೆ ಅದು ಎಷ್ಟು ಮಾತ್ರಕ್ಕೂ ಸರಿಹೋಗುವುದಿಲ್ಲ. ಏಕೆಂದರೆ ಕುಡಿತದಿಂದ ಬಹಳ ಅನ್ಯಾಯವಾಗುತ್ತಾ ಇದ್ದುದು ಎಷ್ಟೋಜನರಿಗೆ ಗೊತ್ತಿದೆ. ನೂರಿಗೆ ನೂರ್ಯನೇ ಸಾಕ್ಷಿ ಇದ್ದಹಾಗೆ ಕುಡಿಯುವುದರಿಂದ ಆಗತಕ್ಕ ಅನಾಹುತಕ್ಕೆ ಕುಡಿತವೇ ಸಾಕ್ಷಿಯಾಗಿದೆ. ಪಾನನಿರೋಧ ಮಾಡಬೇಕೆಂದು ತೀರ್ಮಾನ ಮಾಡಿರುವುದು ಹೊಸದೇನೂ ಅಲ್ಲ, ಕುಡಿತದಿಂದ ಎಷ್ಟೋ ಸಂಸಾರಗಳು ಹಾಳಾಗಿಹೋಗಿವೆ. ಜನರು ಬಹಳ ತೊಂದರೆ ಅನುಭವಿಸುತ್ತಾ ಇದ್ದಾರೆ. ಆದರೆ ಪಾನನಿರೋಧವನ್ನು ಯಾವರೀತಿ ಮಾಡಬೇಕು, ಹೇಗೆ ಮಾಡಬೇಕು ಎನ್ನುವುದನ್ನು ಯೋಚನೆಮಾಡಬೇಕು. ಸ್ವಲ್ಪ ಕುಳಿತು ಮಲಗಬೇಕೇ ಹೊರತು ನಿಂತೇ ಮಲಗಿದರೆ ಕೈಕಾಲು ಮುರಿದುಕೊಳ್ಳಬೇಕಾದೀತು. ಆ ಪರಿಸ್ಥಿತಿ ಆಗಬಾರದು. ಮೆಟ್ಟಲು ಮೆಟ್ಟಲಾಗಿ ಮುಂದುವರಿಯೋಣ. ಏಕ್‌ದಂ ಎಲ್ಲವನ್ನೂ ಒಂದೇಸಾರಿ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದೊಂದು ಡಿಸ್ಟ್ರಿಕ್ಟು ತೆಗೆದುಕೊಂಡು ಈಗ 5 ಡಿಸ್ಟ್ರಿಕ್ಟುಗಳಲ್ಲಿ ಪಾನನಿರೋಧ ಮಾಡಿದ್ದಾರೆ. ಹೀಗಲ್ಲದೇ ಎಲ್ಲಾ ಕಡೆಯೂ ಒಂದೇ ಸಾರಿ ಮಾಡೋಣ ಎಂದರೆ ಹಾಗೂ ಮಾಡಬಹುದು. ಆದರೆ ನಗುವವರಿಗೆ ನಗುಪಾಟಲು ಆಗಬಾರದು, ಜನರಿಗೆ ಸ್ವಲ್ಪ ವಿಚಾರ ತಿಳಿಸಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಪಾನನಿರೋಧವನ್ನು ಯಶಸ್ವಿಯಾಗಿ ಮಾಡಬೇಕಾದದ್ದು ಅತ್ಯವಶ್ಯಕ, ಅದು ನಮ್ಮ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ. ಪಾನನಿರೋಧ ಯಶಸ್ವಿಯಾಗಿ, ಅದರಿಂದ ಖೋತಾ ಬೀಳತಕ್ಕ ಹಣವನ್ನು ಸರಿತೂಗಿಸಿಕೊಳ್ಳಲು ಮುಂದೆ ಸರಿಯಾದ ಮಾರ್ಗ ಕಲ್ಪನೆ ಮಾಡಬೇಕೆಂದು ಅರಿಕೆ ಮಾಡುತ್ತೇನೆ. ಪಾನನಿರೋಧವನ್ನು ಮುಂದುವರಿಸಕೂಡದು ಎಂದು ಮನಸ್ಸಿನಲ್ಲಿ ಇರುವಹಾಗೆ ಇದೆ. ಆದರೆ ಬಾಯಲ್ಲಿ ಬೇರೆತರಹ ಮಾತನಾಡುತ್ತಾ ಇದ್ದೀರಿ. ಆ ರೀತಿ ಮಾತ್ರ ಆಗಬಾರದು. ಇವೊತ್ತೇ ರಾಜ್ಯಹೋದರೂ ಅಡ್ಡಿ ಇಲ್ಲ. ಜನರನ್ನು ಕುಡಿಸಿ, ಅನಾಹುತಕ್ಕೀಡುಮಾಡಿ ಹಣ ಸಂಪಾದನೆಮಾಡತಕ್ಕ ಮಾರ್ಗ ಎಂದೆಂದಿಗೂ ಬೇಡ. ಒಂದೇ ಮನಸ್ಸುಮಾಡಿ ಒಂದೊಂದಾಗಿ ಹೆಜ್ಜೆ ಇಟ್ಟುಕೊಂಡು ಹೋಗೋಣ, ದೇಶದ ಪ್ರಗತಿ ಸಾಧನೆಮಾಡೋಣ ಎಂದು ಅರಿಕೆ ಮಾಡಿಕೊಳ್ಳುತ್ತಾ ಈ ದಿವಸ ಶ್ರೀಮತಿ ಸುಬ್ಬಮ್ಮನವರು ತಂದಿರುವ ಈ ನಿರ್ಣಯಕ್ಕೆ ನನ್ನ ಬೆಂಬಲ ಕೊಡುತ್ತೇನೆ.

*ಶ್ರೀ ಎ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ಶ್ರೀಮತಿ ಸುಬ್ಬಮ್ಮನವರು ಸಭೆಯ ಮುಂದೆ ಇಟ್ಟಿರತಕ್ಕ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನಾವು ಮನಸ್ಸಿನಲ್ಲಿ ಒಂದು ಪೂರ್ಣ ನಿರ್ಧಾರಕ್ಕೆ ಬಂದು ಈ ಪಾನನಿರೋಧವನ್ನು ಕೈಕೊಂಡಿದ್ದೇವೆ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಹಾಗೆ ಒಂದುವೇಳೆ ಅನುಮಾನ ಇರುವುದಾದರೆ ಅದನ್ನು ಪೂರ್ಣವಾಗಿ ತೆಗೆದುಹಾಕತಕ್ಕ ಮನಸ್ಸನ್ನು ಮಾಡಿಕೊಳ್ಳೋಣ. ನಾನಂತೂ ಖಂಡಿತವಾಗಿಯೂ ಪಾನನಿರೋಧದಿಂದ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ಹೇಳಿ ನಂಬಿರತಕ್ಕವರಲ್ಲಿ ಒಬ್ಬ. ನಮ್ಮ ಈಗಿನ ಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡಾಗ, ಅದರಲ್ಲಿ ಶ್ರೀ ಹನುಮಂತಯ್ಯನವರು ನನಗೆ ಜ್ಞಾಪಕ ಇರುವ ಮಟ್ಟಿಗೆ ಕೋಲಾರದಲ್ಲಿ ಮಾಡಿದ ಒಂದು ಭಾಷಣದಲ್ಲಿ, ನಮ್ಮ ಮಂತ್ರಿಮಂಡಲ ಚಿಂದಿಚಿಂದಿ ಆದರೂ ಪರವಾಗಿಲ್ಲ, ಈ ಪಾನನಿರೋಧದ ನೀತಿಯನ್ನು ಮುಂದುವರಿಸದೇ ಬಿಡುವುದಿಲ್ಲ ಎಂದು ಹೇಳಿದರು. ಅದು ನಿಜವಾಗಿಯೂ ನಮಗೆಲ್ಲಾ ಬಹಳ ಮಟ್ಟಿಗೆ ಹೆಮ್ಮೆಯನ್ನುಂಟುಮಾಡತಕ್ಕ ವಿಷಯ. ಆದರೆ ಎಷ್ಟುಮಟ್ಟಿಗೆ ಇದು ಮುಂದುವರಿದಿದೆ ಎಂಬುದನ್ನು ನೋಡಿದರೆ ಮನಸ್ಸಿಗೆ ಸ್ವಲ್ಪ ಬೇಸರವಾಗುತ್ತದೆ. ಅನೇಕರು, ಇದರಲ್ಲಿ ಪ್ರಯೋಜನವಾಗುವುದಿಲ್ಲ, ಕಡ್ಡಾಯವಾಗಿ ಕುಡಿಯುವುದನ್ನು ನಿಲ್ಲಿಸುವುದಕ್ಕೆ ಮನುಷ್ಯ ಸಾಮಾನ್ಯರಿಂದ ಆಗತಕ್ಕ ಕಾರ್ಯವಲ್ಲ, ಯಾವ ವಿಧದಲ್ಲಾದರೂ ಜನರು ಕುಡಿತವನ್ನು ಮಾಡಿಯೇ ಮಾಡುತ್ತಾರೆ, ಸರ್ಕಾರದವರಿಗೆ ಬರತಕ್ಕ ಹಣಕ್ಕೆ ಇದರಿಂದ ಹಾನಿಯಾಗುತ್ತದೆಯೇ ಹೊರತು ಜನರು ಕುಡಿಯತಕ್ಕ ಒಂದು ಆಭ್ಯಾಸವನ್ನು ತಪ್ಪಿಸಿದಂತೆ ಆಗಲಲ್ಲ ಎಂದು ಹೇಳಿ ವಾದಮಾಡುತ್ತಾರೆ. ಅದು ಸ್ವಲ್ಪಮಟ್ಟಿಗೆ ದಿಟ ಅನ್ನುವ ಹಾಗೆ ಕಾಣುತ್ತದೆ. ಎಲ್ಲಾ ಕಾರ್ಯಮಾಡಿದಾಗಲೂ ಹೀಗೆಯೇ. ಕಳ್ಳತನ ಮತ್ತು ಇತರ ಕೆಟ್ಟ ಕೆಲಸಗಳನ್ನು ಮಾಡಬಾರದು ಎಂದು ಹೇಳಿ ಎಷ್ಟೋ ಕಾಲದಿಂದ ವೇದಗಳು ಹೇಳಿವೆ, ಸಂಸ್ಕಾರಗಳು ಹೇಳಿವೆ, ಕಾನೂನು ಕಟ್ಟಳೆಗಳು ಇವೆ, ಆದರೂ ಕಳ್ಳತನಗಳು ನಡೆಯುತ್ತಿವೆ. ಅಂದ ಮಾತ್ರಕ್ಕೆ ಅದು ಸರಿ, ನಡೆದುಕೊಳ್ಳಬಹುದು ಎಂದು ಹೇಳುವುದಕ್ಕೆ ಸಾಧ್ಯವೇ? ಕುಡಿಯತಕ್ಕ ಜನರು ಕೆಲವರು ಹೇಗಾದರೂಮಾಡಿ ಕುಡಿಯುತ್ತಾರೆ ಎಂದು ಹೇಳಿದಮಾತ್ರಕ್ಕೆ ದೇಶದಲ್ಲಿ ಪಾನನಿರೋಧವನ್ನು ಮಾಡಬಾರದು ಅದರಿಂದ ತೊಂದರೆಯಾಗುತ್ತದೆ ಎಂದು ಹೇಳುವುದಕ್ಕಾಗುತ್ತದೆಯೇ? ಈಗ ಕಳ್ಳಬಟ್ಟಿ ಇಳಿಸಿ ಅದರಿಂದ ಅನೇಕರಿಗೆ ಆರೋಗ್ಯ ಕೆಟ್ಟುಹೋಗುತ್ತಾ ಇದೆ, ಅದಕ್ಕೆ ಅವಕಾಶಕೊಡುವುದು ಬೇಡ, ಅದಕ್ಕಿಂತ ಹೆಂಡಕೊಡುವುದು ಉತ್ತಮ, ಶರೀರಕ್ಕೆ ಒಳ್ಳೆಯದಾಗುತ್ತದೆ, ಕುಡಿಯುವುದನ್ನು ಬಿಟ್ಟುಬಿಡಿ ಎಂದು ಹೇಳುವವರು ಉಂಟು. ಇದರಲ್ಲಿ ಸ್ವಲ್ಪಮಟ್ಟಿಗೆ ನಿಜ ಇದ್ದರೂ ಅದನ್ನು ಒಪ್ಪಿಕ್ಕೊಳ್ಳತಕ್ಕ ಸ್ಥಿತಿಯಲ್ಲ ನಾವಂತೂ ಇಲ್ಲ—ಈಗಿನ ಸರ್ಕಾರ ಅಂತೂ ಇಲ್ಲ ಎಂದು ಹೇಳಿ ನಾನು ನಂಬಿಕೊಂಡಿದ್ದೇನೆ. ಶ್ರೀಮತಿ ಸುಬ್ಬಮ್ಮ ನವರು ಹೇಳಿದ ಹಾಗೆ ಕೆಲವು ಕಡೆ ಇದ್ದು ಕೆಲವು ಕಡೆ ಇಲ್ಲದೇ ಇರುವುದರಿಂದ ಸರ್ಕಾರಕ್ಕೂ ತೊಂದರೆ, ಜನಕ್ಕೂ ತೊಂದರೆ.

11-30 A.M.

ಸ್ವಾಮಿ, ಚನ್ನಪಟ್ಟಣ ತಾಲ್ಲೂಕು ಬಹಳ ದಿವಸಗಳಿಂದ, ಈ ಕಾಂಗ್ರೆಸ್ ಸರ್ಕಾರ ಅಥವ ಜಪಾಬ್ದಾರಿ ಸರ್ಕಾರ ಬರುವುದಕ್ಕೆ ಹಿಂದಿನಿಂದ ಪಾನ ನಿರೋಧ ಜಾರಿಯಲ್ಲಿರುವ ತಾಲ್ಲೂಕು. ಆ ತಾಲ್ಲೂಕಿನಲ್ಲಿ ಇವೊತ್ತಿನ ದಿವಸ ಪಾನನಿರೋಧ ಜಾರಿಯಲ್ಲಿದೆಯೆ ಎಂದು ಕೇಳುದಾದರೆ ಬಹಳ ಮಟ್ಟಿಗೆ ಯಾರನ್ನು ಕೇಳಿದರೂ ಇಲ್ಲ ಎಂದು ಹೇಳತಕ್ಕಂಥ ಪರಿಸ್ಥಿತಿಯಿದೆ. ಇದಕ್ಕೆ ಕಾರಣ ಅನೇಕವೇಳೆ ನಾವು ಹೇಳಿದ್ದೇವೆ. ಬೇರೆ ಕಡೆ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಹೆಂಡವನ್ನು ಮಾರುವುದಕ್ಕೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಹೆಂಡ ಇಳಿಸುವುದಕ್ಕೆ ಅವಕಾಶಕೊಡುತ್ತಾರೆ. ಬೇರೆ ಕಡೆ ಮಂಡ್ಯ ಮತ್ತು ಇತರ ಕಡೆಗಳಲ್ಲಿ ಹೆಂಡ ಮಾರುವುದಕ್ಕೆ ಪಾನ ನಿರೋಧ ವಿರುವ ಚನ್ನಪಟ್ಟಣ ತಾಲ್ಲೂಕಿನಲ್ಲಿ ಹೆಂಡ ಇಳಿಸುವುದಕ್ಕೆ ಅವಕಾಶಕೊಡುತ್ತಿದ್ದಾರೆ. 'ಹಾಗೆ ಕೊಡನೇ ಹೋದರೆ ನಮಗೆ ಬಹಳ ಕಷ್ಟವಾಗುತ್ತದೆ, ಬೇರೆ ಕಡೆ ಅಷ್ಟು ಈಚಲ ಮರಗಳಿಲ್ಲ, ಅದರಿಂದ ಸರ್ಕಾರಕ್ಕೆ ಬಹಳ ತೊಂದರೆ ಯಾಗುತ್ತದೆ' ಎಂದು ಹೇಳಿ, ವಾದ ಮಾಡಿ ಸರ್ಕಾರದವರು ಆ ತಾಲ್ಲೂಕಿನಿಂದ ಎಷ್ಟು ಹಣ ಬರುತ್ತಿತ್ತೋ ಅಷ್ಟು ಹಣ ಪಡೆದುಕೊಳ್ಳುವುದೂ ಅಲ್ಲದೆ ಯಾವ ಉದ್ದೇಶದಿಂದ ಆ ಕಾರ್ಯವನ್ನು ಪ್ರಾರಂಭಿಸಿದರೋ ಆ ಉದ್ದೇಶ ಸ್ವಲ್ಪವಾದರೂ ಜಾರಿಗೆ ಬರಲು ಅವಕಾಶವಿಲ್ಲದಂತೆಮಾಡಿದ್ದಾರೆ. ಇದನ್ನು ಎಷ್ಟೋ ಸಲ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದರೂ ಕೂಡ ಅದರಿಂದ ಹೆಚ್ಚು ಪ್ರಯೋಜನ ವೇನೂ ಆಗಿಲ್ಲ. ಇದು ಬಹಳ ಕಷ್ಟದ ಕೆಲಸವೆಂಬುದು ನನಗೆ ಗೊತ್ತಿದೆ. ನಮ್ಮಲ್ಲಿ ಹೇಳುವುದುಂಟು, ಜೇನು ಬಿಟ್ಟಿದವನು ಕೈನೆಕ್ಕದೆ ಇರುತ್ತಾನೆಯೆ ಎಂದು. ಎಷ್ಟೋ ಬಂಡೂಬಸ್ತುಮಾಡಿದ್ದೇವೆಂದು ಹೇಳಿದರೂ ಕೂಡ ಇದು ನಡದೇ ನಡೆಯುತ್ತದೆ. ಸ್ವಾಮಿ, ಆದ್ದರಿಂದ ಅನೇಕ ವಿಧವಾದ ತೊಂದರೆಗಳುಂಟಾಗುತ್ತಿವೆ. ಇದನ್ನು ಶ್ರೀಮತಿ ಸುಬ್ಬಮ್ಮನವರು ಹೇಳಿದ್ದಾರೆ. ಅದನ್ನೇ ಪುನಃ ನಾನು ಹೇಳಬೇಕೆಂಬ ಆಶೆಯುಳ್ಳವನಾಗಿಲ್ಲ. ಪಾನ ನಿರೋಧದಿಂದ ದೇಶದಲ್ಲಿ ಪ್ರಯೋಜನವಾಗುತ್ತಿದೆಯೇ ಎಂಬುದನ್ನು ತಿಳಿಯಬೇಕಾದರೆ ನಿಜವಾಗಿಯೂ ಯಾರ ಹಿತದೃಷ್ಟಿಯಿಂದ ಈ ಕಾರ್ಯವನ್ನು ಕೈಕೊಳ್ಳಬೇಕೆಂದು ಪ್ರಾರಂಭಮಾಡಿದ್ದೇವೋ ಆ ಜನರನ್ನು ತಾವು ವಿಚಾರಮಾಡಬೇಕು. ಎಲ್ಲಿ ಇದು ನಿಜವಾಗಿಯೂ ಜಾರಿಯಲ್ಲದೆಯೋ ಅಲ್ಲಿರುವ ಬಡ ಸಂಸಾರಗಳು, ಬಹಳ ಹಿಂದುಳಿದ ಜನ, ಇದರಿಂದ ಬಹಳ ಮಟ್ಟಿಗೆ ಉಪಯೋಗ ಪಡೆದಿದ್ದಾರೆ. ಆ ಜನರ ಅಭಿಪ್ರಾಯವನ್ನು ತೆಗೆದು ಕೊಳ್ಳುವುದಾದರೆ ಖಂಡಿತವಾಗಿಯೂ ಇದು ಜಾರಿಯಲ್ಲರಬೇಕು, ಪಾನಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬಾರದು, ಪಾನ ನಿರೋಧವನ್ನು ಪೂರ್ಣವಾಗಿ ಜಾರಿಗೆ ತರಬೇಕು ಎಂದು ಅವರು ಅಭಿಪ್ರಾಯವುಳ್ಳವರಾಗಿದ್ದಾರೆ. ಪುಣ್ಯವಂತರೆಂಬವರು ಅಲ್ಪ ಸಂಖ್ಯೆಯಲ್ಲಿದ್ದಾರೆ. ಅವರೇನೇ ಮಾಡಿಕೊಳ್ಳಲಿ ಪಾನದಿಂದ ದೇಶಕ್ಕೆ ಒಂದು ಅನಾಹುತವಾಗುತ್ತದೆ. ಕುಡಿಯುವುದನ್ನು ತಪ್ಪಿಸುವುದಕ್ಕಾಗುವುದಿಲ್ಲವೆಂದು ಅನೇಕ ಜನರು ಹೇಳುವುದನ್ನು ನಾವು ಕೇಳಿದ್ದೇವೆ, ಕಣ್ಣಿನಿಂದ ನೋಡಿದ್ದೇವೆ. ಶ್ರೀಮಾನ್ ರಾಜಗೋಪಾಲಾಚಾರಿಯವರು ಪಾನ ನಿರೋಧವನ್ನು ಜಾರಿಗೆ ತರಲು ಸೇಲಂ ಡಿಸ್ಟ್ರಿಕ್ಟಿಗೆ ಹೋದಾಗ ಅಲ್ಲಿನ ಬಡ ಜನರು ಅದರಲ್ಲೂ ನಿಮ್ನ ವರ್ಗದವರು ಹೆಂಗಸರು ಮಕ್ಕಳು ಅವರಿಗೆ ಪೂಜೆ ಮಾಡಿ ನಮ್ಮನ್ನು ಉದ್ಧಾರಮಾಡಿ ಈ ದಿವಸ ನಮ್ಮ ಮಕ್ಕಳಿಗೆ ಒಂದು ತುತ್ತು ಆಹಾರ ಹೆಚ್ಚಾಗಿ ಹಾಕುವುದಕ್ಕೆ ಅವಕಾಶ, ನಮ್ಮ ಮಕ್ಕಳಿಗೆ ಹೊಸದಾಗಿ ಒಂದು ಬಟ್ಟೆಹಾಕುವುಕ್ಕೆ ಅವಕಾಶ, ಕಲ್ಪಿಸಿಕೊಟ್ಟಿರಿ ಎಂದು ಸ್ತೋತ್ರ ಮಾಡಿದರು. ಆ ರೀತಿ ಯಾವ ದೃಷ್ಟಿಯಿಂದ ಮಾಡಿದರೆಂದರೆ ತಮ್ಮ ಮನೆಯಕಷ್ಟವನ್ನು ಯಾವ ರೀತಿಯಲ್ಲಾದರೂ ಸ್ವಲ್ಪ ಮಟ್ಟಿಗಾದರೂ ಪಾರು ಮಾಡಿದರು ಎಂಬ ದೃಷ್ಟಿಯಿಂದ ಆ ರೀತಿಯಲ್ಲಿ ನಮ್ಮ ದೇಶದಲ್ಲಿರುವ ಅನೇಕ ಬಡ ಜನರ ಹಿತದೃಷ್ಟಿಯಿಂದ ಪೂರ್ಣವಾಗಿ ನಿರೋಧ ಮಾಡಬೇಕು. ಹಣಕಾಸಿನ ದೃಷ್ಟಿಯಿಂದ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗೆ ತೊಂದರೆಯಾಗುತ್ತದೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದಾಕ್ಷಣಕ್ಕೆ ಅರ್ಥಾಭಾರ ನಿರೋಧ ಮಾಡಿರುವುದನ್ನೇ ಇನ್ನೂ ಮುಂದು ವರಿಸಬೇಕೆಂದು ಹೇಳುವುದು ಖಂಡಿತವಾಗಿಯೂ ಸರಿಯಲ್ಲ ಆದಷ್ಟು ಜಾಗ್ರತೆ ದೇಶದ ಎಲ್ಲಾ ಕಡೆಯೂ ಪಾನ ನಿರೋಧವು ಜಾರಿಗೆ ಬರುವಂತೆ ಮಾಡಬೇಕು. ಎಲ್ಲಿ ಪಾನ ನಿರೋಧ ವಿದೆಯೋ ಅಲ್ಲಿ ಹೆಂಡ ಇಳಿಸುವುದಕ್ಕೆ ಅವಕಾಶ ಕೊಟ್ಟು ಸರ್ಕಾರಕ್ಕೆ ಬರುವ ಉತ್ಪತ್ತಿಯೂ ಹೋಗಿ ಬೇರೆ ಇತರರು ದುಡ್ಡು ಮಾಡಿಕೊಳ್ಳುವುದಕ್ಕೆ ಅವಕಾಶಮಾಡಿಕೊಡುವ ಒಂದು ಅನೀತಿಯನ್ನು ಆದಷ್ಟು ಜಾಗ್ರತೆ ತಪ್ಪಿಸಬೇಕು ಎಂದು ಹೇಳಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಪಟ್ಟಾಭಿರಾಮ್ (ಕೋಲಾರ).—ಮಾನ್ಯ ಸಭಾಪತಿಗಳೇ, ಶ್ರೀಮತಿ ಸುಬ್ಬಮ್ಮನವರು ಈ ಸಭೆಯ ಮುಂದೆ ಇಟ್ಟಿರತಕ್ಕಂಥ ನಿರ್ಣಯಕ್ಕೆ ಪೂರ್ಣವಾಗಿ ಸ್ವಾಗತವನ್ನು ಕೊಡುವುದಕ್ಕಾಗಿ ನಿಂತಿದ್ದೇನೆ. ಈ ಸಂದರ್ಭದಲ್ಲಿ ಈ ಮಹಾ ಪ್ರಶ್ನೆಗೆ ಸಂದರ್ಭಾನುಸಾರವಾಗಿ ವಿರೋಧವಾದಂಥ ಅಭಿಪ್ರಾಯಗಳು ಬರುತ್ತಿರುವಾಗ ಈ ದಿವಸ ನಿರ್ದಿಷ್ಟವಾದ ಒಂದು ನಿರ್ಣಯತಂದು ಸರ್ಕಾರದ ಖಚಿತವಾದ ನೀತಿ ಸ್ಪಷ್ಟವಾಗುವುದಕ್ಕೆ ಒಂದು ಅವಕಾಶ ಮಾಡಿದ್ದಕ್ಕೆ ಶ್ರೀಮತಿ ಸುಬ್ಬಮ್ಮನವರು ವಂದನಾರ್ಹರು. ಇಲ್ಲಿ ಒಂದು ವೈಶಿಷ್ಟ್ಯಕಾಣುತ್ತಿದೆ; ಅದನ್ನು ಈ ಮಾನ್ಯ ಸಭೆಯಲ್ಲಿ ಹೇಳಲು ಇಚ್ಛೆಪಡುತ್ತೇನೆ. ಈ ನಿರ್ಣಯ ಈ ಮಾನ್ಯ ಸಭೆಯ 104-105 ಸದಸ್ಯರ ಪೈಕಿ ಮಹಿಳಾ ಸದಸ್ಯರೊಬ್ಬರು ತಂದಿರುವುದರಲ್ಲಿ ಒಂದು ವೈಶಿಷ್ಟ್ಯವಿದೆ. ಪ್ರಾಯಶಃ ಮಾನವೀಯವಾದ ಒಂದು ಭಾವನೆ, ಧರ್ಮ, ನೀತಿ, ಜಾಗೃತಿ, ಜನರಲ್ಲಿ ಉತ್ಸುಕತೆಯಿಂದುಂಟು ಮಾಡಬೇಕೆಂಬ ಭಾವನೆ ಬರುವಂತೆ ಹೆಚ್ಚಿನ ಸಹಕಾರಿಯಾಗಲು ಈ ನಿರ್ಣಯ ಮಹಿಳಾ ಸದಸ್ಯರಿಂದ ಬಂದಿದೆ. ಆದ್ದರಿಂದ ದೈವ ಪ್ರೇರಿತವಾಗಿ ಶ್ರೀಮತಿ ಸುಬ್ಬಮ್ಮನವರು ಈ ನಿರ್ಣಯವನ್ನು ನಮ್ಮ ಮುಂದಿಟ್ಟಿದ್ದಾರೆಂದು ಅಭಿಪ್ರಾಯ ಪಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಪ್ರೆಸ್ ಕೂಡ ಮಾಡುತ್ತಾರೆ.

ಶ್ರೀ ಕೆ. ಪಟ್ಟಾಭಿರಾಮ್.—ಶ್ರೀಮಾನ್ ಹುಚ್ಚೇಗೌಡರ ಭಯ ನಮಗಿಲ್ಲ. ನನಗೆ ಸರ್ಕಾರದ ಅಭಿಪ್ರಾಯ ಖಚಿತವಾಗಿ ಗೊತ್ತು. ಪ್ರಾಯಶಃ ಸರ್ಕಾರದವರು ಇದಕ್ಕೆ ಪೂರ್ಣವಾಗಿ ಸ್ವಾಗತ ಕೊಡುತ್ತಾರೆಂದು ನಾನು ತಿಳಿದಿದ್ದೇನೆ. ಬಡ್ಜೆಟ್ ಅಧಿವೇಶನದಲ್ಲಿ ಈ ನಿರ್ಣಯದಂತೆ ಜಾರಿಗೆ ತರಲು ತಯಾರಾಗಿದ್ದೇವೆಂದು ಆಶ್ವಾಸನ ಕೊಡುತ್ತಾರೆಂದು ನಾನು ನಂಬಿದ್ದೇನೆ. ಆದ್ದರಿಂದ ಹೆಚ್ಚಾಗಿ ಹೇಳಬೇಕಾಗಿಲ್ಲ.

ಪಾನ ನಿರೋಧದ ವಿಚಾರವಾಗಿ ಶ್ರೀಮಾನ್ ವೆಂಕಟಪ್ಪನವರು ಮಾತನಾಡಿದ ಮೇಲೆ ಮಾತನಾಡುವುದು

(ಶ್ರೀ ಕೆ. ಪಟ್ಟಾಭಿರಾಮಿ)

ಬಹಳ ಕಷ್ಟ. ಅವರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಆದರೂ ಒಂದೆರಡು ಭಾವನೆಗಳನ್ನು ಮಾತ್ರ ಸಭಾಪತಿಗಳ ಮೂಲಕ ಸಭೆಯ ಮುಂದಿಡುತ್ತೇನೆ.

ಈಗ ಒಂದು ದೊಡ್ಡ ಆರೋಪಣೆ ಇದಕ್ಕೆ ವಿರೋಧವಾಗಿ ಬರುವುದು ಕಳ್ಳಬಟ್ಟಿ ಸಾರಾಯಿ ತಯಾರಿಕೆ ಹೆಚ್ಚಿ ಅದು ಒಂದು ಗೃಹ ಕೈಗಾರಿಕೆಯಾಗಿ ಪರಿಣಮಿಸಿ ಯಶಸ್ವಿಯಾಗಿ ನಡೆಯುತ್ತಿದೆ ಎಂಬುದು. ಆದರೆ ನನಗೆ ಕಾಣುವುದು ಈ ಆರೋಪಣೆ ಸಂಬಂಧಪಟ್ಟವರ ಕೈ ಚಳಕ, ಯಾರು ಇದಕ್ಕೆ ಸಂಬಂಧಪಟ್ಟಿರುವರೋ ಅವರೇ ಇದಕ್ಕೆ ಕಾರಣರು ಎಂಬುದು. ಈ ಜವಾಬ್ದಾರಿಯನ್ನು ಬಹಳ ಮಟ್ಟಿಗೆ ಸರ್ಕಾರದವರು ಹೊರಬೇಕು. ಒಟ್ಟಿನಲ್ಲಿ ಸಂಸ್ಥಾನದಲ್ಲಿ ಪಾನನಿರೋಧವನ್ನು ಮೂರು ಜಿಲ್ಲೆಗಳಲ್ಲಿ ಜಾರಿಗೆತಂದು, ಹಾಗೆಯೇ ಮುಂದುವರಿಸಿದ ಕಂಟ್ರಾಕ್ಟರುಗಳಿಗೆ ಇತರಕಡೆಗಳಲ್ಲಿ ಅಂಗಡಿಗಳನ್ನು ವಹಿಸಿದ ಸರ್ಕಾರದ ನೀತಿ ಇದಕ್ಕೆ ಕಾರಣ. ಇದರಿಂದ ಹೆಚ್ಚಾಗಿ ಪ್ರಯೋಜನ ಲಭಿಸಿಲ್ಲ. ಮೊದಲು ಕೋಲಾರ ಜಿಲ್ಲೆಯ ಒಂದು ಉದಾಹರಣೆ ಹೇಳುತ್ತೇನೆ. ಹಿಂದಿನ ಮಂತ್ರಿ ಮಂಡಲವಿದ್ದಾಗ ಶ್ರೀಮಾಜೆಂಗಲರಾಯರೆಡ್ಡಿಯವರು ಕೋಲಾರ ಜಿಲ್ಲೆಯಲ್ಲಿ ಪಾನನಿರೋಧವನ್ನು ಜಾರಿಗೆತಂದರು. ದೇಶ ಅವರನ್ನು ಮೆಚ್ಚಿತು ; ಮುಕ್ತ ಕಂಠದಿಂದ ಮೆಚ್ಚಿಗೆಯನ್ನು ವ್ಯಕ್ತಪಡಿಸಿತು. ಹೀಗೆ ಪ್ರಾರಂಭವಾಗಿ ಕಡೆಗೆ ಪಾನನಿರೋಧ ಜಾರಿಯಲ್ಲಿರುವ ಕೋಲಾರ ಜಿಲ್ಲೆಯ ಹನ್ನೊಂದು ತಾಲ್ಲೂಕುಗಳಲ್ಲೊಂದಾದ ಗೋರಿಬಿದನೂರು ತಾಲ್ಲೂಕಿನಲ್ಲಿ ಹೆಂಡ ಇಳಿಸಿ ಅದನ್ನು ಬೆಂಗಳೂರಿನ ಅಂಗಡಿಗಳಿಗೆ ನರಬರಾಯಿ ಮಾಡಲು ಅದೇ ಸರ್ಕಾರ ಅವಕಾಶ ಕೊಟ್ಟಿತು. ಇದು ಮೊದಲನೆಯ ಗದಾ ಪ್ರಹಾರ, ಸಾರ್ವಜನಿಕರಿಂದಲ್ಲ, ಸರ್ಕಾರದಿಂದ ಎಂದು ಧಾರಾಳವಾಗಿ ಹೇಳಬಲ್ಲೆ. ಈ ದಿವಸ ಸರ್ಕಾರ ಒಂದು ಕೆಲಸಮಾಡಬೇಕು. ಮೊಟ್ಟ ಮೊದಲು ಮುಂದಿನ ಜಿಲ್ಲೆಗಳಲ್ಲಿ ಪಾನ ನಿರೋಧವನ್ನು ಮುಂದುವರಿಸಬೇಕು ಎಂಬ ಸಮಸ್ಯೆಯಿರುವಾಗ ಈಗಿರುವ ಜಿಲ್ಲೆಗಳಲ್ಲಿ ಏಕೆ ನಿರೋಧ ಕಾರ್ಯ ಚೆನ್ನಾಗಿ ನಡೆಯುತ್ತಿಲ್ಲವೆಂದು ವಿಮರ್ಶೆ ಮಾಡಬೇಕು. ಇದಕ್ಕೆ ಅನೇಕ ಕಾರಣಗಳನ್ನು ಹೇಳಬಹುದು. ಒಂದು ಸೂಚನೆ ಕೊಡುತ್ತೇನೆ. ಯಾವ ಯಾವ ಜಿಲ್ಲೆಗಳಲ್ಲಿ ಈ ದಿನ ಪಾನನಿರೋಧವನ್ನು ಆಚರಣೆಗೆ ತರಲಾಗಿದೆಯೋ ಅಲ್ಲೆಲ್ಲಾ ಈಚಲುಮರಗಳನ್ನು ಬೆಳೆಯಲು ಉಪಕ್ರಮಿಸಿದ್ದಾರೆ. ಪಾನನಿರೋಧ ಜಾರಿಯಲ್ಲಿರತಕ್ಕ ಜಿಲ್ಲೆಗಳಲ್ಲಿ ಮರಗಳನ್ನು ಹಾಕಿಕೊಳ್ಳಲು ಅಂದರೆ ಶೇಂದಿ ಇಳಿಸಲು ಅವಕಾಶ ಕೊಟ್ಟಿರುವ ಸರ್ಕಾರದ ನೀತಿಯನ್ನು ನಾನು ಎಷ್ಟು ಮಾತ್ರವೂ ಸ್ವಾಗತಿಸುವುದಕ್ಕಾಗುವುದಿಲ್ಲ.

ಇನ್ನೊಂದು ಮುಖ್ಯವಾದ ಅಂಶವನ್ನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ತಿಳಿಸಬೇಕಾಗಿದೆ. ನಾನು ಇದನ್ನು ತಿಳಿಸುವಾಗ ಯಾರೊಬ್ಬರ ಮೇಲೂ ಆರೋಪಿಸುತ್ತಿಲ್ಲ. ಸರ್ವೇಸಾಮಾನ್ಯವಾಗಿ ಇದರಿಂದ ಕೆಟ್ಟ ಪರಿಣಾಮವಾಗುತ್ತದೆಯಲ್ಲಾ, ಇದನ್ನು ತಪ್ಪಿಸಬೇಕಾದುದು ಅತ್ಯಗತ್ಯವೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಯಾವ ಯಾವ ಜಿಲ್ಲೆಗಳಲ್ಲಿ ತಾವು ಈಗ ಪಾನನಿರೋಧವನ್ನು ಜಾರಿಗೆ ತಂದಿದ್ದೀರೋ ಅಲ್ಲಿ ಈ ನೀತಿಯನ್ನು ಜಯಪ್ರದವಾಗಿ ಪರಿಪಾಲಿಸಿಕೊಂಡು ಬರಬೇಕಾದರೆ, ಕುಡಿತವನ್ನು ಹತೋಟಿಗೆ ತರುವ ಅಧಿಕಾರ ವರ್ಗದವರು,—ಪೋಲೀಸ್ ಅಧಿಕಾರಿಗಳು, ರೆವೆನ್ಯೂ ಅಧಿಕಾರಿಗಳು ಮತ್ತು ಇತರೇ ಅಧಿಕಾರ ವರ್ಗದವರು-ಮಾತ್ರ ಈ ಕೆಟ್ಟ ಚಾಳಿಗೆ ಸಿಕ್ಕಿರಬಾರದು. ಅಂಥವರ ವಿಚಾರದಲ್ಲಿ Confidential Report ತರಿಸಿಕೊಂಡು ಅವರ ಪೈಕಿ ಯಾರಾದರೂ ಕುಡಿತಕ್ಕೆ ಸಿಕ್ಕಿರುವವರಾಗಿದ್ದರೆ ಅಂಥವರನ್ನು ಕೂಡಲೇ ಬೇರೆ ಕಡೆಗೆ ವರ್ಗಾಯಿಸಿದರೇ ತಪ್ಪ. ಈ ಪಾನನಿರೋಧ ನೀತಿಯು ಆ ಪ್ರದೇಶದಲ್ಲಿ ಜಯಪ್ರದವಾಗಿ ನಡೆಯಲು ಸಹಾಕಾರಿಯಾಗಿರುತ್ತದೆಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡಿರಬೇಕು. ಹೀಗೆ ಹೇಳಿದ ಮಾತ್ರಕ್ಕೇ ಎಲ್ಲ ಅಧಿಕಾರಿಗಳೂ ಈ ರೀತಿಯ ಕೆಟ್ಟ ಚಾಳಿಯಲ್ಲಿ ನಿರತರಾಗಿದ್ದಾರೆಂಬುದು ನನ್ನ ಅಭಿಮತವಲ್ಲ. ಆ ಪ್ರದೇಶಗಳಲ್ಲಿರುವ ಹಲವು ಮಂದಿ ಅಧಿಕಾರಿಗಳು ವಂದನಾರ್ಹರು. ಆದರೆ, ಈ ಅಧಿಕಾರಿಗಳ ಪೈಕಿ ಪ್ರಾಸಿಕ್ಯೂಟಿಂಗ್ ಅಧಿಕಾರಿಗಳು, ಈ ಪಾನನಿರೋಧ. ನೀತಿಯನ್ನು ಯಶಸ್ವಿಯಾಗಿ ಪಾಲಿಸಿಕೊಂಡು ಬರುವ ತಮ್ಮ ಕಾರ್ಯಭಾರದ ಸಂದರ್ಭದಲ್ಲಿ ಕುಡಿತಕ್ಕೆ ಸಿಕ್ಕಿದವರನ್ನು ಹಿಡಿದು ಅವರ ಮೇಲೆಯೇ ಮೊಕದ್ದಮೆ ಹೂಡಿ ಅವರ ಬಗ್ಗೆ ನ್ಯಾಯಸಂರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರುವ ಈ ಅಧಿಕಾರಿಗಳೇನಾದರೂ ಕುಡಿತದ ಚಟಕ್ಕೆ ಸಿಲುಕಿದವರಾಗಿದ್ದರೆ ತಮ್ಮ ಪಾನನಿರೋಧ ನೀತಿಯು ಹೇಗೆ ಯಶಸ್ವಿಯಾಗಿ ನಡೆಯುತ್ತದೆಯೋ ನನಗೆ ಅರ್ಥವಾಗುವುದಿಲ್ಲ. ಈ ಅಂಶವನ್ನು ಸರ್ಕಾರದವರು ತೀಕ್ಷ್ಣವಾಗಿ ಗಮನಿಸಬೇಕಾದುದು ಅಗತ್ಯ.

ಮತ್ತೊಂದು ಅಂಶವನ್ನು ಸರ್ಕಾರದವರಿಗೆ ಸ್ನೇಹಪೂರ್ವಕವಾಗಿ ಬಿನ್ನವಿಸಿಕೊಳ್ಳುತ್ತೇನೆ. ದೇಶದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ಸರ್ಕಾರದವರು ಒಂದು ಕಾನೂನು ತಂದು ಅದಕ್ಕೆ ಇಂಥ ಮಾನ್ಯ ಸಭೆಯ ಅಂಗೀಕಾರ ಪಡೆದು, ಅದನ್ನು ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಈ ವಿಚಾರವಾಗಿ ಜನತೆಯೆಲ್ಲಾ ಏಕಾಭಿಪ್ರಾಯದಿಂದ ಕೂಡಿರಬೇಕು, ಆಗಲೇ ಯಶಸ್ವಿಯಾದೀತು. ಹಾಗಿಲ್ಲದೆ ಒಂದು ಕಾನೂನನ್ನು ಬಹುಮತ ಪಕ್ಷದ ಬೆಂಬಲದ ಮೇಲೆ ಜಾರಿಗೆ ತಂದ ಮಾತ್ರಕ್ಕೇ ಅದು ಕೂಡಲೇ ಯಶಸ್ವಿಯಾಗಿ ಪರಿಣಮಿಸುತ್ತದೆಂದು ಎಂದಿಗೂ ತಿಳಿಯಬಾರದು. ಈ ಕಾನೂನು ಯಶಸ್ವಿ ಆಗಬೇಕಾದರೆ ಅದರ ಸಾಧಕತೆ ಜನತೆಯ ಮೇಲೆ ಪರಿಣಾಮ ಕಾಣಬೇಕಾದರೆ ಇದೇ generation ನಲ್ಲಿ ಅಲ್ಲ, ಇವರ ಮಕ್ಕಳ ಮೊಮ್ಮಕ್ಕಳ ಕಾಲಕ್ಕೆ ಫಲ ದೊರೆತೀತು ಎಂಬುದನ್ನೂ ಅರಿಯಬೇಕು. ಈಗಿನ ಸರ್ಕಾರ ನಡೆಯುವುದಕ್ಕೆ ಮುಂಚೆ, ಅಧಿಕಾರ ವಹಿಸುವುದಕ್ಕೆ ಮುಂಚೆ ಯಾವ ಪ್ರಮಾಣದಲ್ಲಿ ಯಾವ ಪ್ರಕಾರ ಪ್ರಚಾರ ನಡೆಸಿ ಜನರ ಮನಸ್ಸನ್ನು ತನ್ನ ಕಡೆಗೆ ಒಲಿಸಿಕೊಂಡಿತೋ ಆ ಪ್ರಮಾಣದಲ್ಲಿ, ಆ ಪ್ರಕಾರ ಇತ್ತ, ಧರವಸೆಗಳಿಗೆ ಅನುಸಾರವಾಗಿ ಪ್ರಚಾರ ಕೆಲಸವಾಗುತ್ತಿಲ್ಲವೆಂದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಏಕನದನ್ಯ ಪಕ್ಷದ ಪ್ರತಿನಿಧಿಯಾದ ನಾನು ಬಲವತ್ತರ ಪಕ್ಷವಾದ ಕಾಂಗ್ರೆಸ್ ಪಕ್ಷಕ್ಕೆ—ಆಡಳಿತ ಪಕ್ಷಕ್ಕೆ-ಕೈ ಮುಗಿದು ಒಂದು ವಿಚಾರವನ್ನು ಹೇಳುತ್ತೇನೆ. ತಾವು ಯಾವುದೊಂದು ನೀತಿಯನ್ನೇ ಹಾಕಿಕೊಂಡರೂ ಅದನ್ನು ಕಾರ್ಯರೂಪಕ್ಕೆ ತರುವಾಗ ರಚನಾತ್ಮಕ ದೃಷ್ಟಿಯಿಂದ ನೋಡಿ, ಅದನ್ನು ಕಾರ್ಯಗತಮಾಡುವಾಗ ಇರುವ ಎಡರುತೊಡರುಗಳನ್ನು ಬಿಡಿಸಿಕೊಂಡು ಸರ್ವರ ಸಹಕಾರದಿಂದ ಮುಂದುವರಿಯಿರಿ.

ಈ ಪ್ರೊಹಿಬಿಷನ್ ಆಕ್ಟ್‌ಗೆ ಸಂಬಂಧಿಸಿದ ಮೊಕದ್ದಮೆಯ ವಿಚಾರಗಳು ಗೃಹಮಂತ್ರಿಗಳಿಗೆ ಸೇರಿದುವು. ಅವರಿಗೆ ನಾನು ಈ ಮೂಲಕ ಒಂದು ಸಲಹೆ ಕೊಡುತ್ತೇನೆ. ಇದಕ್ಕೆ ಸಂಬಂಧಿಸಿದ cases ಸಾಧಾರಣವಾಗಿ

warrant procedure ಮೂಲಕ ನಡೆಸುತ್ತಿರಲಾಗಿದೆ. ಈ ರೀತಿಯ ಕಾರ್ಯಕ್ರಮದಿಂದ ವಿಚಾರಣೆ ನಡೆಸಿ, ಸಾಕ್ಷಿ ಸಮನ್ಸ್‌ಯಗಳು ನಡೆದು, ಆಮೇಲೆ ಆಪಾದಿತನು ಏನು ಹೇಳುವುದಿದೆಯೆಂಬುದನ್ನರಿತು ಅನಂತರ ಕ್ರಮಕ್ಕೆಗೆಳ್ಳುವ ಈ ವಾರಂಟು ವಿಧಾನವು ಬಹಳ ನಿಧಾನದ ಕಾರ್ಯಕ್ರಮ. ಯಾವಾಗಲೂ ಈ ಪಾನನಿರೋಧದ ಬಗ್ಗೆಯ ಕಾರ್ಯಕ್ರಮ ಹೆಚ್ಚು ಪರಿಣಾಮಕಾರಿಯಾಗಬೇಕಾದರೆ, summons procedure ಕ್ರಮಕ್ಕೆಗೊಂಡು ಜಾಗ್ರತೆ ತೀರ್ಮಾನ ಮಾಡುವ ಕ್ರಮವನ್ನು ಅನುಸರಿಸಬೇಕು.

ಸರ್ಕಾರದವರು ಪಾನನಿರೋಧ ನೀತಿಯನ್ನು ಯಶಸ್ವಿಯಾಗಿ ಜಾರಿಗೆ ತರಬೇಕಾದರೆ ಅತ್ಯಗತ್ಯವಾಗಿ ಕೈಗೊಳ್ಳಬೇಕಾದ ಕೆಲವು ಕಾರ್ಯಗಳನ್ನು ಸಲಹಾ ರೂಪದಲ್ಲಿ ತಿಳಿಸುತ್ತೇನೆ. ಮೊದಲನೆಯದಾಗಿ, ಪಾನ ನಿರೋಧ ಯಾವ ಯಾವ ಜಿಲ್ಲೆಯಲ್ಲಿ ಮತ್ತು ಯಾವ ಯಾವ ತಾಲ್ಲೂಕುಗಳಲ್ಲಿ ಜಾರಿಗೆ ತಂದಿದ್ದೀರೋ ಅಲ್ಲ ಈಚಲುಮರಗಳನ್ನು ಬೆಳೆಸಲು ಶ್ರೇಂದಿಗೀಚಲು ಅವ ಕಾಶವನ್ನೇ ಕೊಡಬಾರದು. ತಮ್ಮ ಈ ಪಾನ ನಿರೋಧ ನೀತಿಯು ಪೊಟ್ಟಪೊದಲು ಜಾರಿಗೆ ಬಂದುದು ಕೋಲಾರ ಜಿಲ್ಲೆಯಲ್ಲಿ. ಅಲ್ಲೇ ಪೇಲ್ಕಂಡಂತಿರುವಾಗ ಅಲ್ಲಯೇ ಇದು ಯಶಸ್ವಿಯಾಗಿ ನಡೆಯಲಿಲ್ಲವೆಂದು ಜನತೆಮೇಲೆ ಆರೋಪಣೆಮಾಡಿದರೆ ಅಲ್ಲಯ 14 ಲಕ್ಷ ಜನರಿಗೂ ಅಪಮಾನಮಾಡಿದಂತಾಗುತ್ತದೆ. ಮತ್ತೊಂದು ಅಂಶವೆಂದರೆ, ಶ್ರೀಮತಿ ನುಬ್ಬಮ್ಮ ನವರು ಸೂಚಿಸಿರುವ ನಿರ್ಣಯಕ್ಕೆ ಸಂಬಂಧಿಸಿದ್ದು. ನನ್ನ ಮಿತ್ರರಾದ ಶ್ರೀ ಟಿ. ಚನ್ನಯ್ಯನವರು ಪ್ರೊಹಿಬಿಷನ್ ಮಿನಿಸ್ಟರ್ ಆಗಿರುತ್ತಾರೆ. ಕೆಲವು ಜಿಲ್ಲೆಗಳಲ್ಲಿ ಪಾನನಿರೋಧವನ್ನು ಕಡ್ಡಾಯವಾಗಿ ಜಾರಿಗೆ ತಂದು ಕುಡಿತವನ್ನು ಅಲ್ಲಿ ತಡೆಗಟ್ಟುವುದೂ ಅವರ ಕಾರ್ಯ. ಮತ್ತು ಇನ್ನು ಕೆಲವು ಜಿಲ್ಲೆಗಳಲ್ಲಿ ಕುಡಿತಕ್ಕೆ ಅವಕಾಶ ಕೊಡುವುದೂ ಅವರ ಕಾರ್ಯ. ಅವರ ಎರಡೂ ಕರ್ತವ್ಯವೆಂದರೆ ಅದು ವಿರೋಧಾಭಾಸವಾಗಿ ಕಾಣುತ್ತದೆ. ಮುಖ್ಯವಾಗಿ ನಾನು ಇದನ್ನು ಹಣಕಾಸಿನ ದೃಷ್ಟಿಯಿಂದ ನೋಡತಕ್ಕವನಲ್ಲ. ಮಹಾತ್ಮಾ ಗಾಂಧಿಯವರು ದೇಶಾದ್ಯಂತವೂ ಪಾನನಿರೋಧವನ್ನು ಜಾರಿಗೆ ತರಬೇಕಾದುದು ಅತ್ಯವಶ್ಯಕವೆಂದು ಅವರು ಸಾರಿದ್ದು ಒಂದು ಸಾಂಕೇತಿಕ ಅಭಿಪ್ರಾಯ. ಜನರ ನೈತಿಕ ಮಟ್ಟ ಉತ್ತಮಗೊಂಡು ಅವರಲ್ಲಿ ಒಂದು ನೈತಿಕ ಕ್ರಾಂತಿ (Moral Revolution) ಉತ್ಪನ್ನವಾಗಿ ತನ್ಮೂಲಕ ದೇಶದ ಅಭ್ಯುದಯದ ಮಟ್ಟ ಹೆಚ್ಚಲಿ ಎಂಬುದು. ಈ ರೀತಿಯ ಒಂದು ನೈತಿಕ ಕ್ರಾಂತಿಗೆ ಮಹಾತ್ಮರು ಆಶೆಪಟ್ಟರು. ಇದರಲ್ಲಿ ಬಹಳ ಅರ್ಥವಿದೆ. ಈ ವಿಚಾರವನ್ನು ಬರೀ ಹಣಕಾಸಿನ ದೃಷ್ಟಿಯಿಂದ ಸರ್ಕಾರದವರು ನೋಡಬಾರದು. ಈ ನೀತಿಯನ್ನು ಅವರು ಪರಿಪಾಲಿಸಿಕೊಂಡು ಬಂದುದೇ ಆದರೆ ದೇಶದಲ್ಲಿ ಯಾವ ರೀತಿ ಕ್ರಾಂತಿಕಾರಕ ಬದಲಾವಣೆಯಾಗುತ್ತದೆಯೆಂಬುದು ನಮಗೆ ಅತಿ ಮುಖ್ಯವಾದ ಅಂಶವಾಗಿದೆ. ಈ ದೃಷ್ಟಿಯಿಂದ ಸರ್ಕಾರದವರು ಇದನ್ನು ನೋಡಬೇಕೇ ಹೊರತು, ಬಹುಮತಾಭಿಪ್ರಾಯ ಯಾವ ರೀತಿ ಇದೆಯೋ ಆ ರೀತಿಯೇ ಮಾಡಬೇಕೆಂಬುದು ಅಷ್ಟು ಉಚಿತವಲ್ಲ.

Sri K. HANUMANTHAIYA.—Suppose this House decides in favour of scrapping Prohibition. What should we do ?

ಶ್ರೀ ಕೆ. ಪಟ್ಟಾಭಿರಾಮ್.—ಮುಖ್ಯಮಂತ್ರಿಗಳು ಎತ್ತಿರತಕ್ಕ ಪ್ರಶ್ನೆ ಒಳ್ಳೆಯದು. ಅವರ ಮನಸ್ಸಿನಲ್ಲಿ ಏನಿದೆಯೋ ಅದನ್ನು ಚರ್ಚೆಗೆ ನಮ್ಮ ಮುಂದೆ ಇಟ್ಟರು.

ಶ್ರೀ ಕೆ. ಹನುಮಂತಯ್ಯ.—ಅದರಲ್ಲಿಯೂ ಅರ್ಥ ವಿದೆ.

ಶ್ರೀ ಕೆ. ಪಟ್ಟಾಭಿರಾಮ್.—ಇದೆ. ಈ ವಿಚಾರದಲ್ಲಿ ನಾನು ಹೆಚ್ಚು ಚರ್ಚೆಗೆ ಹೋಗದೆ, ಮುಖ್ಯಮಂತ್ರಿಗಳ ಗಮನವನ್ನು ರಾಜ್ಯಾಂಗದಲ್ಲಿ ಅಡಕವಾಗಿರುವ ವಿಧಿಗಳ ಕಡೆಗೆ ಸೆಳೆಯುತ್ತೇನೆ. ರಾಜ್ಯಾಂಗದಲ್ಲಿ ಅತಿ ಮುಖ್ಯ ಭಾಗವಾದ ಮೂಲಭೂತ ಹಕ್ಕುಗಳ (Fundamental Rights) ನ್ನು ಸರ್ಕಾರದವರು ದೇಶದ ಸಮಸ್ತ ಜನರಿಗೂ ಒದಗಿಸಿಕೊಡಬೇಕಾದುದು ಅವರ ಕರ್ತವ್ಯವಾಗಿದೆ. ಅಂತೆಯೇ ಡೈರೆಕ್ಟಿವ್ ಭಾಗವೂ fundamental ಮೂಲಭೂತವಾದದ್ದು. ಸಾಧ್ಯವಾದಮಟ್ಟಿಗೂ ಇದನ್ನು ಒದಗಿಸಿಕೊಡಲು ಸರ್ಕಾರದವರು ನತತಪ್ರಯತ್ನಪಡಬೇಕು. ಒಂದು ವಿಚಾರ ಸ್ಪಷ್ಟಪಡಿಸುತ್ತೇನೆ. ಒಂದು ಹೆಜ್ಜೆ ಇಡುವಾಗ ನಿಧಾನವಾಗಿಟ್ಟುಕೊಂಡು ಹೋಗಲು ರಾಜ್ಯಾಂಗದಲ್ಲಿ ಅವಕಾಶವಿದೆಯೇ ಹೊರತು ಇಟ್ಟಿರತಕ್ಕ ಹೆಜ್ಜೆಯನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ.

ಶ್ರೀ ಬೋರಣ್ಣಗೌಡರು, ಅಲ್ಪಮತದ 24 ಜನರ ಅಭಿಪ್ರಾಯಕ್ಕೆ ಬಹುಮತದ 80 ಜನರು ಏಕೆ ತಲೆ ಬಾಗ ಬೇಕು ಎಂಬ ಅರ್ಥ ಬರುವ ರೀತಿಯಲ್ಲಿ ತಮ್ಮ ವಾದವನ್ನು ಒಂದು ವಿಚಾರದಲ್ಲಿ ಮುಂದಿಟ್ಟರು. ಇದನ್ನು ಅಲ್ಪಮತ, ಬಹುಮತ ಎಂಬ ದೃಷ್ಟಿಯಿಂದ ನೋಡಬಾರದು. ನ್ಯಾಯದೃಷ್ಟಿಗೆ, ಇಡೀ ದೇಶದ ಹಿತದೃಷ್ಟಿಗೆ ಯಾವುದು ಅನುಕೂಲವಾಗಿದೆ ಎಂಬುದನ್ನು ನೋಡಿಕೊಂಡು ಅದಕ್ಕನುಗುಣವಾಗಿ ವರ್ತಿಸಬೇಕು. ಒಂದುವೇಳೆ ಈ ವಿಚಾರದಲ್ಲಿ ಆ 80 ಜನರ ಪಕ್ಷದಲ್ಲಯೇ ವಿರೋಧ ಬಂದರೆ ಆಗ ಅವರನ್ನು ದೇವರೇ ಕಾಪಾಡಬೇಕು. ಆದುದರಿಂದ ಆ 80 ಜನರ ಜೊತೆಗೆ 81ನೆಯ ವನಾಗಿ ನಾನು ಇದ್ದುಕೊಂಡು ಈ ನನ್ನ ವಾದವನ್ನು ಅವರ ವಿವೇಚನೆಗೆ ಬಿಡುತ್ತೇನೆ.

ಒಟ್ಟಿನಲ್ಲಿ ಇಷ್ಟು ಮಾತ್ರ ಹೇಳುತ್ತೇನೆ :

ಯಾವ ಒಂದು ವಿಷಯ ತೆಗೆದುಕೊಂಡರೂ ಹಣಕಾಸಿನ ವಿಚಾರ ಮಧ್ಯೆ ಮಧ್ಯೆ ಬರುತ್ತದೆ. ಇದನ್ನು ಹಣಕಾಸಿನ ದೃಷ್ಟಿಯಿಂದ ನೋಡತಕ್ಕದ್ದಲ್ಲ ಮಹಾತ್ಮಾ ಗಾಂಧಿಜಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅವರ ಸಾಹಿತ್ಯ ಓದಿದವರಿಗೆ ಅದು ಗೊತ್ತಾಗುತ್ತದೆ. ಯಾವುದು ಹೇಗಾದರೂ ಇರಲಿ ಎಲ್ಲಕ್ಕಿಂತ ಹೆಚ್ಚಾಗಿ ಶ್ರೀಮಾನ್ ಹನುಮಂತಯ್ಯನವರಲ್ಲಿ ಒಂದು ಬನ್ನಹ ಮಾಡುತ್ತಾ ಇದ್ದೇನೆ. ಏನೆಂದರೆ ಈಗಿನ ಸರ್ಕಾರಕ್ಕೆ ಅದರಲ್ಲೂ ಕಾಂಗ್ರೆಸ್ ಸರ್ಕಾರಕ್ಕೆ ಒರೆಗಲ್ಲು ಪರೀಕ್ಷೆ ಮಾಡತಕ್ಕ ಕೆಲವು ಸಮಸ್ಯೆಗಳು ಇವೆ. ಆ ಸಮಸ್ಯೆಗಳಿಗೆ ನಿಮ್ಮನ್ನು ಅಳೆಯತಕ್ಕಂಥ ಚೈತನ್ಯ ಇದೆ. ಅದರಲ್ಲಿ ಇದೂ ಒಂದು. ಪಾನ ನಿರೋಧದ ನೀತಿಯ ವಿಚಾರದಲ್ಲಿ ತಾವು ಯಾವುದಾದರೂ ಕಾರಣದಿಂದ, ಏನಾದರೂ ಒಂದು ಕಾರಣ ತೋರಿಸಿ ತಮ್ಮ ನೀತಿಯನ್ನು ಬದಲಾಯಿಸಿದ್ದೇ ಆದರೆ, ಆಗ ಜನಕ್ಕೆ ತಮ್ಮ ನೀತಿಯನ್ನಳೆಯತಕ್ಕ ಪ್ರಮೇಯ ತನ್ನಷ್ಟಕ್ಕೆ ತಾನೇ ಉಂಟಾಗುತ್ತದೆ. ಅದಕ್ಕೆ ಅವಕಾಶ ಕೊಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಕಾಂಗ್ರೆಸ್‌ನ ಮೂಲಭೂತವಾದ ಕೆಲವು ಸಮಸ್ಯೆಗಳಲ್ಲಿ ನಂಬಿಕೆ ಇಡಿ. ಕೆಲವನ್ನು ಕಾರ್ಯಗತ ಮಾಡಿರಿ ಬಹುದು, ಕೆಲವನ್ನು ಮಾಡದೇ ಇರಬಹುದು. ಯಾವುದು ಏನಾದರೂ ಮಾಡಿ. ಹರಿಜನರ ಅಭಿವೃದ್ಧಿ ವಿಚಾರದಲ್ಲಿ, ಪಾನನಿರೋಧದ ವಿಚಾರದಲ್ಲಿ ಮತ್ತು

(ಶ್ರೀ ಕೆ. ಪಟ್ಟಾಭಿರಾಮನ್.)

ಇಂತಹ ಮೂಲಭೂತವಾದ ಸಮಸ್ಯೆಗಳಲ್ಲೇ ಕಾಂಗ್ರೆಸ್ಸಿನ ನೀತಿ, ನಿಲುವು,ನಿಯಮ ಆಫಿರ್ ಭೂತವಾಗಿದ್ದು ಅದರ ಜೀವ ನಜೀವವಾಗುವುದು. ಅಳಿಯತಕ್ಕವನಿಗೆ ಇವು ಕೆಲವು ಮೂಲಭೂತವಾದ ಸಮಸ್ಯೆಗಳು. ಈ ಸಮಸ್ಯೆಗಳಲ್ಲಿ ಹಿಂದೂ ಮುಂದೂ ಎಳೆಯತಕ್ಕವನೋ ಭಾವ ಬೆಳೆಸಬೇಡಿ. ಒಂದು ವೇಳೆ ಸದ್ಯಕ್ಕಂತೂ 5 ಜಿಲ್ಲೆಗಳಲ್ಲಿ ಪಾನನಿರೋಧ ಮಾಡಿದ್ದೇವೆ. ನಿಧಾನವಾಗಿ ಮುಂದುವರಿಸೋಣ, ಈಗ ಸರ್ಕಾರಕ್ಕೆತೊಂದರೆ ಇದೆ, ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ಹೇಳುವುದಾದರೆ ಪ್ರಜಾಪ್ರತಿನಿಧಿಗಳ ಮೇಲಾಗಿ ಒಟ್ಟು ದೇಶದ ಭೆಂಬಲ ನಿಮಗೆ ಇರುತ್ತದೆ ಎಂದು ಧೈರ್ಯವಾಗಿ ಹೇಳಬಲ್ಲೆ ಯಾವಾಗಲೂ ಒಂದು ನೈತಿಕವಾದ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗಿ. ದೇಶಕ್ಕೆ ಉಪಕಾರವಾಗುವಂಥ ಮನೋಭಾವ ಸರ್ಕಾರ ತೋರಿಸಿದರೆ ದೇಶಕ್ಕೆ ದೇಶವೇ, ವಿರೋಧ ಪಕ್ಷದವರೂ ಕೂಡ, ತಮ್ಮ ಮನಃಪೂರ್ವಕವಾದ ಸಹಕಾರವನ್ನು ಕೊಜ್ಜೇ ಕೊಡುತ್ತಾರೆ. ಆದ್ದರಿಂದ ಇದನ್ನು ಹಣಕಾಸಿನ ದೃಷ್ಟಿಯಿಂದ ನೋಡಬಾರದು ಎಂದು ಹೇಳಿ 80 ಜನರಿಂದ ಕೂಡಿರತಕ್ಕ ತಮ್ಮ ಕಾಂಗ್ರೆಸ್ ಪಕ್ಷದ ಮುಂದೆ ಹೇಳಲು ಸಾಹನಪಟ್ಟೆ. ಈ ದಿವಸ ತಮ್ಮ ಮೂಲಕ ಸರ್ಕಾರವನ್ನು ನಡೆಸತಕ್ಕ ಮಾನ್ಯ ಮಂತ್ರಿಗಳಲ್ಲಿ ಒಂದು ಅಂಶವನ್ನು ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ಶ್ರೀಮಾ ಚನ್ನಯ್ಯನವರಾಗಲಿ, ಶ್ರೀಮಾ ಹನುಮಂತಯ್ಯನವರಾಗಲಿ ಕಾಂಗ್ರೆಸ್ ನೀತಿಯ ಸ್ಪರ್ಶಕ್ಕೆ ಸಂಬಂಧಪಟ್ಟ ಈ ಪಾನನಿರೋಧದ ವಿಚಾರದಲ್ಲಿ ಮಾತ್ರ ಯಾರೊಬ್ಬರಿಗೂ ಅನುಮಾನ ಬರತಕ್ಕ ರೀತಿಯಲ್ಲಿ ದಯವಾಡಿ ತಮ್ಮ ಭಾಷಣಗಳನ್ನು ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಇದು ಖಚಿತವಾದ ಮೂಲ ಪ್ರಶ್ನೆ. ಒಂದು ವಿಚಾರಕ್ಕೆ ಸಂತೋಷ ಪಡೋಣ. ಶ್ರೀಮಾ ಹುಚ್ಚೇಗೌಡರು ಎಷ್ಟು ಚೆನ್ನಾಗಿ ಇದಕ್ಕೆ ಸಮರ್ಥನೆ ಕೊಟ್ಟರು ಎಂಬುದನ್ನು ಹೇಳುತ್ತಾ ಇದ್ದೇನೆ. ಆದರೆ ಏನು ಪರಿಣಾಮ ಆಯಿತೋ ಈ ಸಭೆಗೆ ಗೊತ್ತಿಲ್ಲ. ಶ್ರೀಮತಿ ಸುಬ್ಬಮ್ಮನವರು ಈ ದಿವಸ ತಂದಿರತಕ್ಕ ಈ ನಿರ್ಣಯದ ವಿಚಾರಕ್ಕೆ ಸಂಬಂಧಪಟ್ಟಂತೆ ಹಿಂದಿನ ನೆನಪು ನನಗೆ ಬರುತ್ತಿದೆ. ಶ್ರೀಮಾ ಹನುಮಂತಯ್ಯನವರು ಕೋಲ್ಸ್‌ಪೇಟೆ ತಾಲ್ಲೂಕಿನಲ್ಲಿ ಎಂದರೆ ಈಗಿನ ರಾಮನಗರ ತಾಲ್ಲೂಕಿನಲ್ಲಿ ಇಡೀ ಮೈಸೂರು ದೇಶವೇ ಮೆಚ್ಚುವಂಥ, ಯಾವ ಒಂದು ಮಹಾ ಚಳುವಳಿಯನ್ನು ಮಾಡಿ ಕೀರ್ತಿಗಳಿಸಿದರೋ ಆ ಕೀರ್ತಿ ಮುಖ್ಯ ಮಂತ್ರಿಗಳಾಗಿ ಕಳೆದುಕೊಳ್ಳುವ ದೌರ್ಭಾಗ್ಯ ಬರದೇ ಇರಲಿ. ಆ ಸೌಭಾಗ್ಯ ಹಾಗೆಯೇ ಚಿರಾಯುವಾಗಿರಲಿ ಪಾನನಿರೋಧದ ವಿಚಾರದಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶ ಕೊಡದೇ ಏಕಾಭಿಪ್ರಾಯದಿಂದ ಈ ಮಾನ್ಯ ಸಭೆ ಶ್ರೀಮತಿ ಸುಬ್ಬಮ್ಮನವರ ನಿರ್ಣಯವನ್ನು ಅಂಗೀಕಾರ ಮಾಡಬೇಕು ಎಂದು ಹೇಳಿ ಇದನ್ನು ಸ್ವಾಗತಿಸಿ ನನ್ನ ಮಾತನ್ನು ಪೂರೈಸುತ್ತೇನೆ.

*ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ (ಶಿವಮೊಗ್ಗ).— ಮಾನ್ಯ ಅಧ್ಯಕ್ಷರೇ, ಪಾನನಿರೋಧದ ವಿಚಾರದಲ್ಲಿ ಹೆಚ್ಚಿಗೆ ಏನೂ ಹೇಳಬೇಕಾದುದಿಲ್ಲ. ಇದು ಎಲ್ಲರಿಗೂ ತಿಳಿದಂಥ ವಿಚಾರವಾಗಿದೆ. ಪಾನನಿರೋಧಜಾರಿಯಲ್ಲಿರತಕ್ಕ ಜಿಲ್ಲೆಗಳಲ್ಲಿ ಜನಗಳ ಜೀವನದ ಮಟ್ಟ ಎಷ್ಟೋ ಉತ್ತಮ ಸ್ಥಿತಿಗೆ ಬಂದಿದೆ. ಜನರು ತಮ್ಮ ತಮ್ಮ ಮನೆಗಳನ್ನ ಚೊಕ್ಕಟ್ಟವಾಗಿಟ್ಟುಕೊಂಡು, ಹೆಂಚಿನ ಮನೆಗಳನ್ನು ಕಟ್ಟಿಕೊಂಡು, ಒಳ್ಳೆಯ ಶುಚಿಕರವಾದ ಪದಾರ್ಥಗಳನ್ನು ಉಪಯೋಗಿಸುತ್ತಾ ಇದ್ದಾರೆ. ಪಾನನಿರೋಧದಿಂದ ಉಳಿತಾಯವಾದ ಹಣದಿಂದ ಜಮೀನುಗಳನ್ನು ಖರೀದಿಮಾಡಿ, ವ್ಯವಸಾಯದಲ್ಲಿ ನಿರತರಾಗಿ, ಮನೆಗಳಲ್ಲಿ ಹಸುಕರುಗಳನ್ನು ಕಟ್ಟಿಕೊಂಡು, ಹಾಲನ್ನು ಕರೆದು, ಉಪಯೋಗಿಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ರೀತಿಯಾದ ಮಾರ್ಗದಲ್ಲಿ ಅವರ ನೀತಿಯ ಮಟ್ಟ ಉತ್ತಮವಾಗಿ, ಒಳ್ಳೆಯ ಪ್ರಜೆಗಳಾಗುವದಕ್ಕೆ ಪ್ರಾರಂಭಿಸಿರುವುದನ್ನು ನೋಡಿದರೆ ಇನ್ನೂ ಉಳಿದಿರತಕ್ಕ ನಾಲ್ಕು ಜಿಲ್ಲೆಗಳಲ್ಲೂ ಕೂಡ ಪಾನನಿರೋಧವನ್ನು ಜಾರಿಗೆ ತಂದು ಧೈರ್ಯವಾದ ಒಂದು ಹೆಜ್ಜೆ ಮುಂದಿಡುವುದರಿಂದ ಲೋಕಕ್ಕೆ ಕಲ್ಯಾಣವಾಗುತ್ತದೆ ಎಂದು ಹೇಳುತ್ತೇನೆ. ಶ್ರೀಮಾ ಪಟ್ಟಾಭಿರಾಮರವರು ಎಲ್ಲ ವಿಷಯಗಳನ್ನು ವಿಶದೀಕರಿಸಿ ಮನಸ್ಸಿಗೆ ಹಿಡಿಯುವಂತೆ ಹೇಳಿದ್ದಾರೆ. ಅವರು ಹೇಳಿರತಕ್ಕ ವಿಷಯಗಳನ್ನು ಪುಷ್ಟೀಕರಿಸಿ ಈ ನಿರ್ಣಯಕ್ಕೆ ನನ್ನ ಬೆಂಬಲವನ್ನು ಕೊಡುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ಈ ಸಭೆಯಲ್ಲಿ ಪಾನನಿರೋಧದ ವಿಚಾರವಾಗಿ ಮಾಡಿರತಕ್ಕಂಥ ಭಾಷಣಗಳನ್ನು ಕೇಳಿದ್ದೇನೆ. ಆ ಭಾಷಣಗಳ ವಾದಗಳ ವಿಚಾರನಾಗಿ ನನಗಾದರೂ, ಸರ್ಕಾರಕ್ಕಾದರೂ ಯಾವ ಬಿನ್ನಾಭಿಪ್ರಾಯವೂ ಇಲ್ಲ. ಪಾನನಿರೋಧ ಜಾರಿಗೆ ಬರಬೇಕಾದದ್ದು ಅವಶ್ಯಕ ಎಂಬ ಅಭಿಪ್ರಾಯ ಕಾಂಗ್ರೆಸ್ ಸಂಸ್ಥೆಯದು ಆಗಿದೆ. ಹಾಗೆಯೇ ಇತರ ರಾಜಕೀಯ ಪಕ್ಷಗಳದೂ ಆಗಿದೆ. ಶ್ರೀಮಾ ಹುಚ್ಚೇಗೌಡರೂ ಕೂಡ ಒಂದು ರಾಜಕೀಯ ಪಕ್ಷದ ಅಧ್ಯಕ್ಷರಾಗಿ ಆ ವಾದವನ್ನು ಪುಷ್ಟೀಕರಿಸಿದ್ದಾರೆ. ಈ ದಿವಸ ವಾದ ವಿವಾದಗಳ ಪ್ರಶ್ನೆ ಅಲ್ಲ. ಇದನ್ನು ಎಷ್ಟು ಮಟ್ಟಿಗೆ ಯಶಸ್ವಿಯಾಗಿ ಮಾಡಬೇಕು ಎಂಬುದೇ ಪ್ರಶ್ನೆ. ಆ ವಿಷಯವಾಗಿ ಹೆಚ್ಚು ಮಂದಿ ಹೆಚ್ಚು ಕಾಲ ಪ್ರಸ್ತಾಪಿಸಿದ್ದರೆ ಚೆನ್ನಾಗಿತ್ತು. ಇಂದು ಉಂಟಾಗಿರತಕ್ಕಂಥ ನಂದಿಗ್ಧ ಸನ್ನಿವೇಶ ಪಾನನಿರೋಧ ಎಲ್ಲೆಲ್ಲಿ ಜಾರಿಗೆ ಬಂದಿದೆಯೋ ಅಲ್ಲಿ ಯಶಸ್ವಿಯಾಗಿ ನಡೆಯುತ್ತಾ ಇಲ್ಲ ಎಂಬತಕ್ಕದ್ದೇ, ಈ ಸನ್ನಿವೇಶವನ್ನುಂಟುಮಾಡಿದೆ. ಎಷ್ಟೇ ಉತ್ಸಾಹಯುತವಾದ ಪಕ್ಷ ಆಗಲಿ, ಮಂತ್ರಿಮಂಡಲ ಆಗಲಿ,ಈ ಕೂಗಿನ ಮುಂದೆ ಸ್ವಲ್ಪ ಯೋಚನೆ ಮಾಡಬೇಕಾಗಿ ಬರುತ್ತದೆ. ಶ್ರೀಮಾ ವೆಂಕಟಪ್ಪನವರು ಅದನ್ನು ಬಹಳ ಚೆನ್ನಾಗಿ ಹೇಳಿದರು. ಬಡವರು ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಇದ್ದಾರೆ. ಪುಣ್ಯವಂತರು ಎಂದು ನಾನು ಹೇಳುವುದಿಲ್ಲ, ಅದನ್ನು ಇಂಗ್ಲೀಷ್‌ನಲ್ಲಿ ಹೇಳಬೇಕಾದರೆ upper class of society ಎಂದು ಹೇಳಬಹುದು, ಪ್ರಜಾಭಿಪ್ರಾಯವನ್ನು ರೂಪಿಸುವುದಕ್ಕೆ ಕೆಲವು ಕ್ಷೇತ್ರಗಳಲ್ಲಿ ಅವಕಾಶವುಂಟುಮಾಡಿಕೊಂಡಿರತಕ್ಕವರು ಕೆಲವರು ಈ ಪಾನನಿರೋಧದ ವಿಚಾರವಾಗಿ ಪತ್ರಿಕೆಗಳಲ್ಲಿ, ಸಂಪಾದಕೀಯಗಳಲ್ಲಿ ಬೇಡ ಬೇಡ ಎಂಬ ಬೊಬ್ಬೆಯನ್ನು ಪ್ರತಿ ದಿವಸವೂ ಇಡುತ್ತಾ ಇದ್ದಾರೆ.

12 NOON.

ಇದರ ಜೊತೆಗೆ ಇದೊಂದು ದೌರ್ಭಾಗವೆಂದೇ ಹೇಳಬೇಕು. ಉನ್ನತಾಧಿಕಾರಿಗಳ ಶ್ರೇಣಿಯಲ್ಲಿ ಕೆಲವು ಮಂದಿಗೆ—ಬಹಳ ಮಂದಿಗೆ ಎಂದು ಹೇಳುವುದಿಲ್ಲ—ಈ ವಿಷಯದಲ್ಲಿ ಆಸಕ್ತಿಯಿಲ್ಲ. ಏಕೆಂದರೆ ಅವರಲ್ಲೂ ಇದನ್ನು ಅಭ್ಯಾಸಮಾಡಿಕೊಂಡಿರುವವರಿದ್ದಾರೆ. ಈ ಒಂದು ಕಾರಣಕ್ಕಾಗಿ ಅವರನ್ನು ಡಿಸ್‌ಮಿಸ್ ಮಾಡಿ

ಮನೆಗೆ ಕಳುಹಿಸುವುದಕ್ಕಾಗುವುದಿಲ್ಲ. ಶ್ರೀಮಾನ್ ಪಟ್ಟಾಭಿರಾಮರವರು ಸಾಧಾರಣವಾಗಿ ಪೋಲೀಸು ಅಧಿಕಾರಿಗಳು ಮತ್ತು ಕಾನ್ಸ್ಟೇಬಲ್ಲುಗಳು ಕೆಲವರು ಈ ರೀತಿಯಿದ್ದಾರೆ, ಎಲ್ಲರೂ ಇಲ್ಲ ಎಂದು ಹೇಳಿದರು; ಆ ವಿಷಯ ನನಗೂ ಗೊತ್ತಿದೆ; ಅದು ನನಗೆ ಗೊತ್ತಿಲ್ಲದೆ ಇಲ್ಲ. ಕೆಲವು ಪೋಲೀಸು ಅಧಿಕಾರಿಗಳು ಮತ್ತು ಕೆಲವು ಇತರ ಅಧಿಕಾರಿಗಳು ಕೂಡ ಈ ಪಾನ ನಿರೋಧದ ವಿಷಯದಲ್ಲಿ ಅಷ್ಟು ಆಸಕ್ತಿವಹಿಸಿಲ್ಲದಿರುವುದರ ಜೊತೆಗೆ ತಾವೂ ಇದನ್ನು ಆಚರಣೆಯಲ್ಲಿಟ್ಟುಕೊಂಡಿದ್ದಾರೆಂಬ ಆಪಾದನೆ ಕೂಡ ಅಲ್ಲಲ್ಲಿ ಕೇಳಿ ಬರುತ್ತಿದೆ. ಇದಕ್ಕೆಲ್ಲಾ ಏನು ಪರಿಹಾರ ಎಂಬುದನ್ನು ನಾನಾಗಲೇ ಪ್ರಸ್ತಾಪಮಾಡಿದಹಾಗೆ ನಾವು ಯೋಚನೆ ಮಾಡಿದ್ದೇವೆ.

"Eternal vigilance is the price of Liberty", I would say, "Eternal vigilance is the price of Prohibition." ವಿಶೇಷವಾಗಿ ಪ್ರಚಾರಮಾಡಿ ರಾಮನಗರ ತಾಲ್ಲೂಕಿನಲ್ಲಿ ಈಗ ಸುಮಾರು 18 ವರ್ಷಗಳ ಹಿಂದೆ ದೊಡ್ಡ ಚಳವಳಿ ನಡೆಸಿ ಆ ತಾಲ್ಲೂಕಿನಲ್ಲಿ ಹೆಂಡ ಮತ್ತು ಸಾರಾಯಿ ಮಾರುವುದನ್ನು ನಿಲ್ಲಿಸುವ ಒಂದು ವಾತಾವರಣ ಕಲ್ಪಿಸಿದೆವು. ನಾವೆಲ್ಲರೂ ಕೈಕೊಂಡ ಪ್ರಚಾರ ಕಾರ್ಯದಿಂದ ಆ ರೀತಿ ಆಯಿತು. ಈ ದಿವಸ ಪ್ರಚಾರವನ್ನು ಯಾರು ಮಾಡುತ್ತಿದ್ದಾರೆ? ಎಲ್ಲರೂ ಸರ್ಕಾರವನ್ನು ಆಕ್ಷೇಪಿಸುವುದನ್ನು ಬಿಟ್ಟು ಅದಕ್ಕಾಗಿ ಕಳೆಯುವ ಕಾಲವನ್ನು ಪ್ರಚಾರಕಾರ್ಯದಲ್ಲಿ ವಿನಿಯೋಗಿಸುವುದಾದರೆ ದೇಶದಲ್ಲಿ ಪಾನ ನಿರೋಧ ಯಶಸ್ವಿಯಾಗುವುದು ಅಸಾಧ್ಯವಲ್ಲ. ಇದಕ್ಕೆ ತಕ್ಕ ವಾತಾವರಣವನ್ನು ಕಲ್ಪಿಸತಕ್ಕಂಥ ಪವಿತ್ರ ಕಾರ್ಯದಲ್ಲಿ ಅನೇಕರು ಆಸಕ್ತಿ ವಹಿಸುತ್ತಿಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು. ಎಲ್ಲಾದರೂ ಕಳ್ಳಬಟ್ಟಿ ಸಾರಾಯಿ ಇಳಿಸುವುದನ್ನಾಗಲಿ, ಕದ್ದು ಹೆಂಡ ಮಾರುವುದನ್ನಾಗಲಿ ಕಂಡರೆ, ಅದನ್ನು ತಡೆಯಲು ಇಲ್ಲವಾದ ಮಾಡುವವರು ಪ್ರಯತ್ನಿಸಿದ್ದಾರೆಯೇ ಎಂಬುದನ್ನು ಅವರು ನಿಸ್ಪೃಹತೆಯಿಂದ ಪರಿಶೋಧನೆ ಮಾಡಿಕೊಳ್ಳಬೇಕು. ಯಾವ ತೀವ್ರತೆಯಿಂದ ಪಾನ ನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಇಲ್ಲಿ ಈ ಸಭೆಯಲ್ಲಿ ಹೇಳುತ್ತಿದ್ದಾರೋ ಅದೇ ತೀವ್ರತೆಯಿಂದ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕೂಡ ಪ್ರಚಾರ ಕಾರ್ಯವನ್ನು ಮಾಡಿದರೆ ಈ ಪಾನ ನಿರೋಧ ಸಂಪೂರ್ಣವಾಗಿ ಯಶಸ್ವಿಯಾಗಿ ಆಗಿಯೇ ಆಗುತ್ತದೆ. ಆ ಪ್ರಚಾರ ಕಾರ್ಯವನ್ನು ನಾವು ಮಾಡಬೇಕು. ಆ ಪ್ರಚಾರ ಕಾರ್ಯವನ್ನು ಬಿಟ್ಟು ಅಲ್ಪಸ್ವಲ್ಪ ಪ್ರಯತ್ನ ಮಾಡತಕ್ಕಂಥ ಸರ್ಕಾರವನ್ನು ಪ್ರತಿಕ್ಷಣದಲ್ಲೂ ಕೂಡ ಈ ವಿಷಯದಲ್ಲಿ ಟೀಕೆಮಾಡುತ್ತಾ ಸರಿಯಾದ ವಾತಾವರಣವನ್ನು ಕಲ್ಪಿಸದೆ ಹೋಗಿರುವುದೇ ಬಹಳಮಟ್ಟಿಗೆ ಈ ದಿವಸದ ನಂದಿಗ್ದ ಪರಿಸ್ಥಿತಿಗೆ ಕಾರಣವಾಗಿದೆ. ಪ್ರಜಾ ಸೋಷಿಯಲಿಸ್ಟ್ ಪಕ್ಷವಾಗಲಿ ಕಾಂಗ್ರೆಸ್ ಸಂಸ್ಥೆಯವರಾಗಲಿ ತಮ್ಮ ಧ್ಯೇಯವಾದ ಈ ಪಾನನಿರೋಧವನ್ನು ಸಂಪೂರ್ಣವಾಗಿ ಯಶಸ್ವಿಯಾಗಿ ಮಾಡಬೇಕೆಂದು ಸ್ಥಿರಮನಸ್ಸನ್ನಿಟ್ಟವರಾಗಿ ಪ್ರಯತ್ನಿಸಿದರೆ ಅದು ಯಶಸ್ವಿಯಾಗಿ ಆಗಿಯೇ ಆಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಪೂರ್ಣವಾಗಿ ಜಾರಿ ಮಾಡಿ.

ಶ್ರೀ ಕೆ. ಹನುಮಂತಯ್ಯ.—ಶ್ರೀಮಾನ್ ಹುಚ್ಚೇಗೌಡರು ಹೇಳುತ್ತಾರೆ, ಪೂರ್ಣವಾಗಿ ಜಾರಿ ಮಾಡಿದರೆ ಸಹಕರಿಸುತ್ತೇವೆ ಎಂದು; ಬಹಳ ಸಂತೋಷ. ನಾವು ಮಾಡತಕ್ಕಂಥ ಭಾಷಣಗಳ ವಿಚಾರದಲ್ಲಿ ಶ್ರೀಮಾನ್ ಪಟ್ಟಾಭಿರಾಮರವರು ಮತ್ತು ಶ್ರೀಮಾನ್ ವೆಂಕಟಪ್ಪನವರು ಕೆಲವು ಮಾತುಗಳನ್ನು ಹೇಳಿದ್ದಾರೆ. ನಾವು ಭಾಷಣಗಳನ್ನು ಮಾಡುವಾಗ ಒಂದೇ ನೀತಿಯನ್ನು ಪ್ರತಿಪಾದಿಸುತ್ತಿದ್ದೇವೆ. ಅರ್ಥ ಮಾಡಿಕೊಳ್ಳುವಾಗ ವ್ಯತ್ಯಾಸವಾದರೆ ಅದಕ್ಕೆ ನಾನು ಜವಾಬ್ದಾರನಲ್ಲ. ನಾನು ಮಂತ್ರಿಮಂಡಲ್ಲಿ ಚೂರು ಚೂರಾದರೂ ಪರವಾಗಿಲ್ಲ, ಈ ಪಾನ ನಿರೋಧವನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ ಎಂಬ ಅರ್ಥದಲ್ಲಿ ಹೇಳಲಿಲ್ಲ. ಈ ಸಂದರ್ಭದಲ್ಲಿ ಬಂದ ಒಂದು ವಾದಕ್ಕೆ ಈ ದಿವಸ ಉತ್ತರ ಕೊಡಬೇಕಾಗಿ ಬಂದಿದೆ. ಕೆಲವರು ಹೇಳಿದರು, ನಂಸ್ಥಾನದಲ್ಲಿ ಆಹಾರ ಧಾನ್ಯಗಳ ಬೆಲೆಯನ್ನು ಹೆಚ್ಚಿಸಿದ್ದರಿಂದ ಆ ಬೆಲೆಯನ್ನು ಜನರು ಕೊಡುವುದಕ್ಕೆ ಬಹಳ ಕಷ್ಟವಾಗಿದೆ, ಪಾನನಿರೋಧವನ್ನಾದರೂ ಕೂಡ ರದ್ದುಮಾಡಿ ಅದರಲ್ಲಿ ಬರುವ ಆದಾಯವನ್ನು ಸರ್ಕಾರದವರು ಉಪಯೋಗಿಸಿಕೊಂಡು ಆಹಾರ ಪದಾರ್ಥಗಳ ಬೆಲೆಗಳನ್ನು ಕಡಮೆ ಮಾಡಿ ಎಂದು. ಅದಕ್ಕೆ ಉತ್ತರವಾಗಿ ನಾನು ಆ ರೀತಿ ಮಾಡುವುದಕ್ಕಿಂತ ಮಂತ್ರಿಮಂಡಲ ಚೂರಾದರೂ ಪರವಾಗಿಲ್ಲ ಎಂದು ಹೇಳಿದೆ. ಆದ್ದರಿಂದ ಈಗ ಎಷ್ಟು ಪಾನನಿರೋಧ ಜಾರಿಯಲ್ಲಿದೆಯೋ ಆ ಮಾರ್ಗದಲ್ಲಿ ಹಿಂದುವರಿಯುವುದಿಲ್ಲ ಎಂದು ಹೇಳಿದೆನೇ ಹೊರತು ಮುಂದುವರಿಯುವ ವಿಷಯವನ್ನು ಆ ದಿವಸ ನಾನು ಪ್ರಸ್ತಾಪಮಾಡಲಿಲ್ಲ. ಈಗ ಕಾಲ ಬಂದಿದೆ. ಈ ದಿವಸ ಸಭೆಯಲ್ಲಿ ಸಂಪೂರ್ಣವಾಗಿ ಪಾನನಿರೋಧ ಮುಂದುವರಿಯಬೇಕು ಅನ್ನತಕ್ಕಂಥ ಅಭಿಪ್ರಾಯ ವ್ಯಕ್ತಪಟ್ಟಿದೆ. ನಾನೂ ಒಬ್ಬ ಸದಸ್ಯನಾಗಿ—ಮುಖ್ಯ ಮಂತ್ರಿಯಾಗಲ್ಲ—ಕೇಳಿಕೊಳ್ಳುವುದು ಆ ಅಭಿಪ್ರಾಯ ಬರೀ ಸಭೆಯಲ್ಲಿ ವ್ಯಕ್ತಪಡದೆ ಪ್ರತಿಯೊಂದು ಕ್ಷೇತ್ರದಲ್ಲೂ, ಪ್ರತಿಯೊಂದು ಊರಲ್ಲೂ ಆ ಅಭಿಪ್ರಾಯ ಬಲವಾಗಿ, ಕುಡಿಯುವವನು, ಕಳ್ಳಬಟ್ಟಿ ಸಾರಾಯಿ ಮಾರುವವನು, ಕಳ್ಳತನದಿಂದ ಸಾಗಿಸತಕ್ಕಂಥವನು ಇವರೆಲ್ಲರಿಗೂ ಅವಕಾಶವಾಗದಿರುವ ಒಂದು ವಾತಾವರಣವನ್ನು ತಾವು ದಯವಿಟ್ಟು ಕಲ್ಪಿಸಬೇಕೆಂದು ನಾನು ತಮ್ಮಲ್ಲಿ ಸವಿನಯ ಪ್ರಾರ್ಥನೆಯನ್ನು ಮಾಡುತ್ತೇನೆ. ಈ ಪ್ರಾರ್ಥನೆ ಮತ್ತು ಅಭಿಪ್ರಾಯ ಎರಡೂ ಸಮಂಜಸವಾಗಿರುವಾಗ ಹೆಚ್ಚಾಗಿ ಹೇಳಬೇಕಾಗಿಲ್ಲ. ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ. ಶ್ರೀಮತಿ ಸುಬ್ಬಮ್ಮನವರು ಭಾಷಣ ಮಾಡುತ್ತಿದ್ದಾಗ ಪೋಲೀಸಿನವರು ಕೊಡತಕ್ಕಂಥ ಕಿರುಕುಳವನ್ನು ಹೆಚ್ಚಾಗಿ ಪ್ರಸ್ತಾಪ ಮಾಡಿದರು. ಪೋಲೀಸಿನವರಿಗೆ ನಾವೇ ಈ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಆಜ್ಞೆ ಮಾಡುವುದು, ಆಮೇಲೆ ಅವರ ಮೇಲೆ ಈ ರೀತಿಯಾಗಿ ಆರೋಪ ಮಾಡುವುದು ಒಂದಕ್ಕೊಂದು ವಿರುದ್ಧವಾಗುವುದು. ಎಲ್ಲಾದರೂ ಅನ್ಯಾಯವಾದರೆ, ಯಾವ ಪೋಲೀಸು ಅಧಿಕಾರಿಯಾಗಲಿ ಅಕ್ರಮವಾಗಿ ನಡೆದುಕೊಂಡರೆ, ಆತನಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನು ಇದ್ದೇ ಇದೆ. ಆದರೆ ಸಾರ್ವತ್ರಿಕವಾಗಿ ಪೋಲೀಸು ಅಧಿಕಾರಿಗಳಿಂದ ಜನರಿಗೆ ಕಿರುಕುಳವಾಗುತ್ತದೆಂಬ ವಾದವನ್ನೇ ನಾವು ಹೆಚ್ಚು ಮಾಡಿಕೊಂಡು ಹೋದರೆ ಯಾರು ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಜವಾಬ್ದಾರರೋ ಅವರ ಉತ್ಸಾಹ ಭಂಗಮಾಡಿದ ಹಾಗಾಗುತ್ತದೆ.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಅನಾವಶ್ಯಕವಾಗಿ ಮಾಡುವುದನ್ನು ನಾವು ಹೇಳದೆ ಹೋದರೆ ತೊಂದರೆಯಾಗುತ್ತದೆ.

ಶ್ರೀ ಕೆ. ಹನುಮಂತಯ್ಯ.—ಯಾರು ಅನ್ಯಾಯ ಮಾಡಿದ್ದಾರೆಂಬುದನ್ನು ಸಾಕ್ಷಿಗಳ ಮುಖಾಂತರ ಸರ್ಕಾರಕ್ಕೆ ತಿಳಿಸಿದರೆ ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ.

ಈ ವಿಷಯವನ್ನು ನಾವು ಗಹನವಾಗಿ ಯೋಚಿಸಿದರೆ ಈ ರೀತಿ ಇದ್ದ ಪ್ರತಿವಾದಿ ಒಟ್ಟಿಗೆ ಹೊರಟರೆ ಕಾರ್ಯಯಶಸ್ವಿಯಾಗಿ ಆಗುವುದಿಲ್ಲ. ಇನ್ನು ಸರ್ಕಾರದವರು ಪಾನನಿರೋಧವನ್ನು ಯೋಚನೆಯಲ್ಲಿಟ್ಟುಕೊಂಡು ಆ ಬಗ್ಗೆ ಕಾರ್ಯಕ್ರಮವನ್ನು ಮುಂದುವರಿಸಿದರೆ ಅದರಿಂದ ನಷ್ಟವಾಗತಕ್ಕ ಹಣವನ್ನು ಯಾವ ರೀತಿ ಸಂಪಾದಿಸಿಕೊಳ್ಳಬೇಕೆಂಬುದೇ ದೊಡ್ಡ ಪ್ರಶ್ನೆ. ಆದುದರಿಂದ ಈ ಪ್ರಶ್ನೆಯನ್ನೂ ಸಹ ದೇಶದ ಹಿತದೃಷ್ಟಿಯಿಂದ ನಾವುಗಳು ಬಗೆಹರಿಸಬೇಕೇ ಹೊರತು ಒಂದು ಸಿದ್ಧಾಂತವನ್ನೇ ನರ್ವಸ್ವವೆಂದು ಹೇಳಿ ಪ್ರಜಾಭಿಪ್ರಾಯಕ್ಕೆ ಮತ್ತು ದೇಶದ ಅಭ್ಯುದಯಕ್ಕೆ ಮನ್ನಣೆ ಕೊಡದೆ ನಡೆಯುವುದಕ್ಕೆ ಆಗುವುದಿಲ್ಲ. ಅಲ್ಲದೆ ಈ ಪಾನನಿರೋಧ ಯೋಜನೆಯಿಂದ ದೇಶದ ಆರ್ಥಿಕಾಭಿವೃದ್ಧಿ ಸಾಧನೆಯಾಗುತ್ತದೆಂದು ಯಾರೊಬ್ಬರೂ ಹೇಳಲು ಪ್ರಯತ್ನಪಟ್ಟಿಲ್ಲ. ಆದರೂ ಈ ಸಭೆಯಲ್ಲಿರತಕ್ಕ ಪ್ರತಿಯೊಬ್ಬರೂ ಈ ವಿಷಯದಲ್ಲಿ ಆಸಕ್ತಿಯಿಂದ ವರ್ತಿಸಿಯೇ ಇದ್ದಾರೆ. ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕಾದರೆ ಇನ್ನೂ ಸುಮಾರು ಹತ್ತುಕೋಟಿ ರೂಪಾಯಿಗಳನ್ನು ನಾವು ಒದಗಿಸಬೇಕು—ಸಾಲದ ಮೂಲಕ ಆರುಕೋಟಿ ರೂಪಾಯಿ, ಕಂದಾಯದ ಮೂಲಕ ಮೂರುಕೋಟಿ ರೂಪಾಯಿ ಒದಗಿಸಬೇಕು. ಇಷ್ಟು ಪೊಬಲಗನ್ನು ನಾವು ಒದಗಿಸದೆ ಹೋದರೆ ಪಂಚವಾರ್ಷಿಕ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತ ಮಾಡುವುದಕ್ಕಾಗುವುದಿಲ್ಲ. ಇಂಥ ಸಮಯದಲ್ಲಿ ಉಪಯೋಗಕರವಾದ ಆದಾಯವನ್ನು ನಾವು ಬಿಟ್ಟರೆ ಮತ್ತಷ್ಟು ಕಷ್ಟ ಉಂಟಾಗುತ್ತದೆ. ಆದರೂ ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ನಾನು ಈ ವಾದವನ್ನು ಉಪಯೋಗಿಸುತ್ತಿಲ್ಲ. ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತಂದರೂ, ಯಾವ ಕುಡಿತದಿಂದ ಸರ್ಕಾರಕ್ಕೆ ದುಡ್ಡು ಬರುತ್ತಿತ್ತೆಯೋ ಅದು ಅವರಲ್ಲಿಯೇ ಉಳಿದು ತನ್ಮೂಲಕ ಆರ್ಥಿಕಾಭಿವೃದ್ಧಿ ಸಾಧನೆ ಆಗುತ್ತದೆ. ಇದು ಅಷ್ಟು ಗುರುತರವಾದ ಕಾರಣವೆಂದೂ ಈ ಉದ್ದೇಶದಿಂದ ಮುಂದುವರಿಯುವುದಿಲ್ಲವೆಂದೂ ಹೇಳುವುದಕ್ಕಾಗುವುದಿಲ್ಲ. ಎಲ್ಲಾ ವಿಷಯವನ್ನೂ ಸಮಾಲೋಚನೆಗೆ ತೆಗೆದುಕೊಂಡು ಮುಂದಿನ ಬಡ್ಜೆಟ್ ಅಧಿವೇಶನದಲ್ಲಿ ನನ್ನ ಬಡ್ಜೆಟ್ ಭಾಷಣದಲ್ಲಿ ಈ ವಿಷಯವನ್ನೊಳಗೊಂಡ ಅಭಿಪ್ರಾಯವನ್ನು ತಿಳಿಸಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಆದುದರಿಂದ ಶ್ರೀಮತಿ ನುಬ್ಬಮ್ಮನವರು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

Mr. SPEAKER.—I will put the amendment to the vote of the House. What does the mover of the amendment propose to do with his amendment ?

Sri B. HUTCHE GOWDA.—I press it.

Mr. SPEAKER.—The question is:—

"That the words and figures 'from 1st July 1954' may be added at the end of the resolution."

The motion was negatived.

ಅಧ್ಯಕ್ಷರು.—ಇನ್ನು ಈ ನಿರ್ಣಯದ ಬಗ್ಗೆ ಶ್ರೀಮತಿ ನುಬ್ಬಮ್ಮನವರು ಏನು ಅಭಿಪ್ರಾಯಪಡುತ್ತಾರೆಂಬುದನ್ನು ಸೂಚಿಸಬೇಕು.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಇದನ್ನು ವಾಪಸ್ಸು ತೆಗೆದುಕೊಳ್ಳಲು ನಾನೆಯೆ ಅನುಮತಿ ಕೋರುತ್ತೇನೆ.

The Resolution was, by leave, withdrawn.

RULING BY THE SPEAKER WITH REFERENCE TO APPROPRIATION BILL.

Mr. SPEAKER.-Sri B. Hutche Gowda raised certain points yesterday in connection with the Appropriation Bill which I consider it desirable to clarify.

The first point he made was that the Appropriation Bill does not indicate how the additional demands are proposed to be met by Government and as such the Bill was irregular. As Hon'ble Members will notice from the financial provisions of the Constitution the practice of earmarking specified taxes or receipts for particular expenditure is not recognised. All revenue is paid into the Consolidated Fund and all sums issued out of the Consolidated Fund are appropriated by the Appropriation Acts. No doubt when the main estimates are presented to the House, it has been the practice to specify the revenue receipts, the revenue expenditure and to indicate in case of a deficit, as to how the deficit is proposed to be covered. This has been the practice in our Legislature also. But where supplementary estimates are presented, it is neither the practice nor is it possible to undertake a review of the entire financial position. A correct picture of the accounts would not be available until several months after the period for which such position has to be ascertained. But it is usual to expect the Finance Minister in introducing Supplementary Estimates to indicate how the demand is proposed to be met, whether by Central assistance not contemplated